International Journal of Kannada Research 2021; 7(2): 04-11

International Journal of Kannada Research
www.kannadajournal.com

ISSN: 2454–5813
IJKR 2021; 7(2): 04-11
© 2021 IJKR
www.kannadajournal.com
Received: 04-02-2021
Accepted: 06-03-2021

**ಪ್ರತಾಪ ವಿ**
ಸಮಾಜಶಾಸ್ತ್ರ ಅಧ್ಯಯನ ವಿಭಾಗ (ಮೈಸೂರು ವಿವಿ)
ಮನಸಗಂಗೋತ್ರಿ, ಮೈಸೂರು

**ಪ್ರೊ. ಎಸ್ ಯಶೋದ ಮುಖ್ಯಸ್ಥರು**
ಸಮಾಜಶಾಸ್ತ್ರ ಅಧ್ಯಯನ ವಿಭಾಗ (ಮೈಸೂರು ವಿವಿ)
ಮನಸಗಂಗೋತ್ರಿ, ಮೈಸೂರು

**Corresponding Author:**
**ಪ್ರತಾಪ ವಿ**
ಸಮಾಜಶಾಸ್ತ್ರ ಅಧ್ಯಯನ ವಿಭಾಗ (ಮೈಸೂರು ವಿವಿ)
ಮನಸಗಂಗೋತ್ರಿ, ಮೈಸೂರು

# ಲೈಂಗಿಕ ಅಲ್ಪಸಂಖ್ಯಾತ ಸಮುದಾಯವಾದ ಮಂಗಳಮುಖಿಯರ ಕುರಿತ ಸಮಾಜಶಾಸ್ತ್ರೀಯ ಅಧ್ಯಯನ

**ಪ್ರತಾಪ ವಿ, ಪ್ರೊ. ಎಸ್ ಯಶೋದ ಮುಖ್ಯಸ್ಥರು**

**ಪೀಠಿಕೆ**

ದ್ವಿತೀಯ ದರ್ಜೆಯ ಪ್ರಜೆಗಳೆಂದು ಪಿತೃಪ್ರಧಾನ ಸಮಾಜದಿಂದ ಕರೆಸಿಕೊಳ್ಳುವ ಮಹಿಳೆಯರೇ ಸ್ವಾಭಿಮಾನದಿಂದ ಬದುಕಲು ಇಷ್ಟು ವರ್ಷ ಬೇಕಾಯಿತು. ಇನ್ನು ಕೆಲವು ವರ್ಷಗಳ ಹಿಂದೆಯಷ್ಟೇ ತೃತೀಯ ಲಿಂಗಿಗಳು (ಟ್ರಾನ್ಸ್‌ಜೆಂಡರ್) ಎಂದು ಮಾನ್ಯತೆ ಪಡೆದಿರುವ ಇವರು ಘನತೆ–ಗೌರವದಿಂದ ಬದುಕಲು ಅದೆಷ್ಟು ವರ್ಷಗಳು ಬೇಕೋ? ಆದರೆ ಇದು ಜಾಗತಿಕ ಯುಗ, ಬದಲಾವಣೆಗೆ ಬೇಗ ಹೊಂದಿಕೊಳ್ಳುವ ಯುಗ. ಆದ್ದರಿಂದ ಮಂಗಳಮುಖಿಯರ ಕುರಿತಾಗಿ ಸಂಶೋಧನೆ, ಚರ್ಚೆ, ಚಳುವಳಿ, ಸಂವಾದಗಳು ಮಾನವೀಯತೆಯ ದೃಷ್ಟಿಯಿಂದ ನಡೆದರೆ ಅವರೂ ಸಹ ಎಲ್ಲರಂತೆ ಸಮಾಜದಲ್ಲಿ ಬದುಕುವ ಸಾಧ್ಯತೆಯಿದೆ.

ಟ್ರಾನ್ಸ್‌ಜೆಂಡರ್ (ಮಂಗಳಮುಖಿ) ಎಂಬ ಪದವು ನಮ್ಮ ಪರಿಸರಕ್ಕೆ ಹೊಸದು. ಟ್ರಾನ್ಸ್‌ಜೆಂಡರ್ ಎಂದರೆ ಲಿಂಗ ಪರಿವರ್ತನೆ ಮಾಡಿಕೊಂಡವರು ಎಂದು ಅರ್ಥ. ಗಂಡುಮಗುವಾಗಿ ಹುಟ್ಟಿದವರು ಪುರುಷರಾಗಬೇಕು, ಹೆಣ್ಣುಮಗುವಾಗಿ ಹುಟ್ಟಿದವರು ಮಹಿಳೆಯರಾಗಬೇಕೆಂದು ನಮ್ಮ ಸಮಾಜ ಇಲ್ಲಿಯವರೆಗೂ ನಂಬಿಕೊಂಡುಬಂದ ಮೌಲ್ಯವಾಗಿದೆ. ಹುಟ್ಟುವಾಗ ದೈಹಿಕವಾಗಿ ಗಂಡಾಗಿ ಹುಟ್ಟಿ ಭಾಗಶಃ ಅಥವಾ ಪೂರ್ತಿಯಾಗಿ ಮಹಿಳೆಯರಾಗಿ ಗುರುತಿಸಿಕೊಳ್ಳಲು ಇಚ್ಛಿಸುವವರು ಮತ್ತು ದೈಹಿಕವಾಗಿ ಹೆಣ್ಣಾಗಿ ಹುಟ್ಟಿ ಭಾಗಶಃ ಅಥವಾ ಪೂರ್ತಿ ಪುರುಷರಾಗಿ ಗುರುತಿಸಿಕೊಳ್ಳಲು ಇಚ್ಛಿಸಿಕೊಳ್ಳುವವರನ್ನು ಟ್ರಾನ್ಸ್‌ಜೆಂಡರ್ ಅಥವಾ ಲಿಂಗ ಪರಿವರ್ತನೆ ಮಾಡಿಕೊಂಡವರು ಎನ್ನುತ್ತೇವೆ. ಈ ಜನರ ಭಾವನೆಯು ಅವರ ಶರೀರಕ್ಕೆ ಹೊಂದಿಕೊಳ್ಳದ ಕಾರಣ ತಮ್ಮ ಶರೀರವನ್ನು ಬೇರೆ ಲಿಂಗಕ್ಕೆ ಹೊಂದಿಸಿಕೊಳ್ಳಲು ಹಾರ್ಮೋನ್ ಅಥವಾ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು ಇಚ್ಛಿಸುತ್ತಾರೆ. ಹೆಚ್ಚಿನವರಿಗೆ ಈ ಚಿಕಿತ್ಸೆ ಮಾಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಏಕೆಂದರೆ ಚಿಕಿತ್ಸೆ ಬಹಳ ದುಬಾರಿಯಾದುದು.

ಟ್ರಾನ್ಸ್‌ಜೆಂಡರ್ ಬಗ್ಗೆ ಹೆಚ್ಚಿನ ವರದಿಗಳು ಅಧ್ಯಯನಗಳು ಪಾಶ್ಚಾತ್ಯ ದೇಶಗಳಲ್ಲದೇ ಸಂಪ್ರದಾಯಬದ್ಧ ಭಾರತದಲ್ಲೂ ಮತ್ತು ಪ್ರಾಚೀನ ಸಮಾಜಗಳಲ್ಲಿಯೂ ಆಗಿವೆ. ಆದರೂ ಜೆಂಡರ್ ಪದದ ಅರ್ಥ ಸಂಸ್ಕೃತಿಯಿಂದ ಸಂಸ್ಕೃತಿಗೆ ಬದಲಾವಣೆಯಾಗುತ್ತಲೇ ಬಂದಿದೆ. ಟ್ರಾನ್ಸ್‌ಜೆಂಡರ್ ಜನ ಹಿಂದಿನ ಸಮಾಜದಲ್ಲೂ ಇದ್ದರು, ಇಂದಿನ ಸಮಾಜದಲ್ಲೂ ಇದ್ದಾರೆ. ಆದರೂ ಅವರ ಬಗ್ಗೆ ಜನಸಾಮಾನ್ಯರಿಗೆ ಹೆಚ್ಚಿನ ತಿಳುವಳಿಕೆ ಇಲ್ಲ. ಹೆಚ್ ಐ ವಿ ರೋಗ ವ್ಯಾಪಕವಾಗಿ ಹಬ್ಬುತ್ತಿರುವ ಹಿನ್ನೆಲೆಯಲ್ಲಿ ಇತ್ತೀಚೆಗೆ ಲೈಂಗಿಕ ಅಲ್ಪಸಂಖ್ಯಾತರಾದ ಈ ಸಮುದಾಯದ ಬಗ್ಗೆ ಸಾರ್ವಜನಿಕರಿಗೆ ಸ್ವಲ್ಪಮಟ್ಟಿಗೆ ಗಮನ ಬಂದಿದೆ. ಟ್ರಾನ್ಸ್‌ಜೆಂಡರ್ ನಲ್ಲಿ ಕೋಥಿಗಳು, ಹಿಜ್ರಾಗಳು, ಜೋಗಪ್ಪಗಳು, ಎಂ ಟು ಎಫ್(ಗಂಡಾಗಿ ಹುಟ್ಟಿ ಹೆಣ್ಣಾಗುವವರು), ಎಫ್ ಟು ಎಂ (ಹೆಣ್ಣಾಗಿ ಹುಟ್ಟಿ ಗಂಡಾಗುವವರು) ಇತ್ತೀಚೆಗೆ ಮಂಗಳಮುಖಿಯರೆಂದು ಗುರುತಿಸಿಕೊಳ್ಳುತ್ತಾರೆ.

ಕೋಥಿಗಳು ಎಂದರೆ ಗಂಡಾಗಿ ಹುಟ್ಟಿ ಹೆಣ್ಣಿನ ಭಾವನೆಯೊಂದಿಗೆ ಜೀವಿಸುವವರು. ಇವರು ಹಿಜ್ರಾ ಸಂಸ್ಕೃತಿಯ ಒಂದು ಭಾಗವಾಗಿರುತ್ತಾರೆ. ತಮ್ಮನ್ನು ತಾವು ಮಹಿಳೆಯರಾಗಿ ಅಥವಾ ಸ್ತ್ರೀ ಭಾವನೆಗಳನ್ನು ಹೊಂದಿರುವ ಪುರುಷರಾಗಿ ಗುರುತಿಸಿಕೊಳ್ಳುತ್ತಾರೆ. ಸಾಮಾನ್ಯವಾಗಿ ಕೋಥಿಗಳು ಲಿಂಗ ಪರಿವರ್ತನೆ ಮಾಡಿಸಿಕೊಳ್ಳುವುದಿಲ್ಲ. ಅದೇ ರೀತಿ ಹಿಜ್ರಾಗಳು ಗಂಡಾಗಿ ಹುಟ್ಟಿ ಮಹಿಳೆಯರಾಗಿ ಗುರುತಿಸಿಕೊಳ್ಳಲು ಇಚ್ಛಿಸುವ ಕಾರಣ ತಮ್ಮ ಶಿಶ್ನವನ್ನು ಶಸ್ತ್ರಚಿಕಿತ್ಸೆಯ ಮೂಲಕ ತೆಗೆಸಿ ಹೆಣ್ಣಾಗುತ್ತಾರೆ. ಇದನ್ನು ಹಿಜ್ರಾಗಳ ಭಾಷೆಯಲ್ಲಿ ನಿರ್ವಾಣ ಎನ್ನುತ್ತಾರೆ. ಈ ರೀತಿಯ ಹಿಜ್ರಾಗಳೆ ದಕ್ಷಿಣ ಏಷ್ಯಾದಲ್ಲಿ ಕಾಣಸಿಗುವ ಲೈಂಗಿಕ

ಅಲ್ಪಸಂಖ್ಯಾತರಾಗಿದ್ದಾರೆ. ಹಿಜ್ರಾ ಎಂಬುದು ಒಂದು ಅರೇಬಿಕ್ ಪದವಾಗಿದ್ದು, ಇದರ ಅರ್ಥ ವಲಸೆ ಎಂಬುದಾಗಿದೆ. ಹಿಜ್ರಾ ಎಂದರೆ ಪ್ರವಾದಿ ಮಹಮ್ಮದ್‌ರು ಅವರ ಅನುಯಾಯಿಗಳೊಂದಿಗೆ ಮದೀನ ನಗರಕ್ಕೆ ಕಿಸ್ತ.ಶಕ 622 ರಲ್ಲಿ ವಲಸೆ ಹೋಗಿರುವುದಾಗಿ ಇಸ್ಲಾಂನಲ್ಲಿ ನಮೂದಿಸಲಾಗಿದೆ. ಇದೇ ರೀತಿ ಹಿಜ್ರಾಗಳು ತಮ್ಮ ಅಸ್ತಿತ್ವವನ್ನು ರಾಮಾಯಣ ಮಹಾಭಾರತ ಮತ್ತು ಬೈಬಲ್‌ಗಳಲ್ಲೂ ಗುರುತಿಸಿಕೊಳ್ಳುತ್ತಾರೆ. ಇಂತಹ ಹಿನ್ನೆಲೆಯುಳ್ಳ ಮಂಗಳಮುಖಿಯರಿಗೆ ನಾವು ನಂಬಿಕೊಂಡು ಬಂದಿರುವ ಸಾಂಪ್ರದಾಯಿಕ ಸಮಾಜದಲ್ಲಿ ಒಂದು ಒಳ್ಳೆಯ ಸ್ಥಾನಮಾನವಿರುವುದಿಲ್ಲ. ಮಂಗಳಮುಖಿ ಅಥವಾ ಮಧ್ಯಲಿಂಗಿಗಳು ಎಲ್ಲರಂತೆ ಉಣ್ಣುವ, ಉಡುವ, ಆತ್ಮಗೌರವದಿಂದ ಬದುಕುವ ಆಸೆ ಮತ್ತು ಕನಸುಗಳನ್ನು ಇಟ್ಟುಕೊಂಡವರು. ಆದರೆ ಹೆಣ್ಣಾಗಿ ಬದುಕಲು ಬಯಸುವವರು ಅವರಿರುವ ರೀತಿಯಿಂದಲೇ ಸಾಮಾನ್ಯವಾಗಿ ಸಮಾಜದಿಂದ ಅನುಭವಿಸುವ ಅವಮಾನ, ತಾರತಮ್ಯ, ಅವಗಣನೆ, ಹಿಂಸೆ, ದೌರ್ಜನ್ಯ ಬೆಚ್ಚಿಬೀಳಿಸುವಂತದ್ದು.

**ಪರಿಭಾಷೆಗಳ ಅರ್ಥ ಮತ್ತು ವಿವರಣೆ**

**ಲಿಂಗ :** ವ್ಯಕ್ತಿಯ ವಂಶವಾಹಿಯಿಂದ ನಿರ್ಧರಿಸಲ್ಪಟ್ಟಿರುವ ಗಂಡು ಮತ್ತು ಹೆಣ್ಣು ಮಕ್ಕಳಲ್ಲಿನ ಜೈವಿಕ ಲಕ್ಷಣಗಳ ವ್ಯತ್ಯಾಸವೇ ಲಿಂಗ. ಉದಾ: ಗಂಡಸರಲ್ಲಿ ಮಾತ್ರ ವೀರ್ಯಾಣು ಉತ್ಪತ್ತಿಯಾಗುತ್ತದೆ. ಹೆಂಗಸರಲ್ಲಿ ಮಾತ್ರ ಅಂಡಾಣು ಉತ್ಪನ್ನವಾಗಿ ಗರ್ಭಧಾರಣೆ ಆಗುತ್ತದೆ.

**ಲಿಂಗ ಗುರುತಿಸುವಿಕೆ :** ಹುಟ್ಟಿದ ಮಗು ಗಂಡೋ ಅಥವಾ ಹೆಣ್ಣೋ ಎಂದು ಅವರ ಲೈಂಗಿಕ ಅಂಗಗಳನ್ನು ನೋಡಿ ಗುರುತಿಸುತ್ತಾರೆ. ಹಲವಾರು ಸಂದರ್ಭಗಳಲ್ಲಿ ಉಪಯೋಗಿಸುತ್ತಿರುವ ನಿರ್ದಿಷ್ಟ ಹೆಸರು, ಆಭರಣಗಳು, ಬಟ್ಟೆ ಇತ್ಯಾದಿಗಳಿಂದ ಮಗುವಿನ ಲಿಂಗವನ್ನು ಗುರುತಿಸಲಾಗುತ್ತದೆ. ಕೆಲವೊಂದು ಮಕ್ಕಳ ಅಂಗಗಳು ಸ್ಪಷ್ಟವಾಗಿ ಗಂಡು ಅಥವಾ ಹೆಣ್ಣಿನಂತೆ ಇರದಿರುವುದರಿಂದ ಅವರನ್ನು ಮಂಗಳಮುಖಿಯರೆಂದು ಕರೆಯುತ್ತಾರೆ. ಕೆಲವು ಮಕ್ಕಳು ತಮ್ಮ ಲೈಂಗಿಕ ಗುರುತಿಗಿಂತ ಬೇರೆಯಾಗಿಯೇ ಭಾವಿಸುತ್ತಾರೆ ಅಥವಾ ಅವರು ಹುಟ್ಟಿನಿಂದ ಅಥವಾ ಬೆಳೆಸಿದ್ದಕ್ಕಿಂತ ಭಿನ್ನ ಲಿಂಗದವರಂತೆ ಗುರುತಿಸಿಕೊಳ್ಳುತ್ತಾರೆ.

**ಲಿಂಗತ್ವ :** ಗಂಡಸುತನ ಅಥವಾ ಗಂಡಸಿನ ಪಾತ್ರಗಳು ಮತ್ತು ಹೆಂಗಸುತನ ಅಥವಾ ಹೆಂಗಸಿನ ಪಾತ್ರಗಳು ಏನೆಂಬ ಸಮಾಜದ ವಿಚಾರಗಳು ಲಿಂಗತ್ವವನ್ನು ನಿರೂಪಿಸುತ್ತವೆ.

**ಲಿಂಗ ಪಾತ್ರಗಳು :** ಗಂಡಸರು ಮತ್ತು ಹೆಂಗಸರು ಇರುವ ಸಮಾಜ ಅಥವ ಕುಟುಂಬವು ಸಾಮಾಜಿಕ ಪಾತ್ರಗಳನ್ನು ನೀಡುತ್ತದೆ. ಉದಾ: ಅವರು ಹೇಗೆ ನಡೆದುಕೊಳ್ಳಬೇಕು ಅಥವಾ ಯಾವ ಕೆಲಸಗಳನ್ನು ಮಾಡಬೇಕು ಎನ್ನುವುದನ್ನು ಹೇಳುತ್ತದೆ.

**ಜೈವಿಕ ಲಿಂಗ :** ಇದು ಹೆಣ್ಣು–ಗಂಡುಗಳ ನಡುವಿನ ಜೈವಿಕ ವ್ಯತ್ಯಾಸವಾಗಿರುವುದು. ಜೈವಿಕ ಲಿಂಗ ಎಂಬುದು ಸ್ತ್ರೀ–ಪುರುಷರಲ್ಲಿ ವ್ಯತ್ಯಾಸ ಕಲ್ಪಿಸುವ ಒಂದು ಜೈವಿಕ ಅಂಶವಾಗಿದೆ. ಇದು ಜೈವಿಕ ದೃಷ್ಟಿಕೋನದಿಂದ ಕೂಡಿದುದಾಗಿದೆ.

**ಸಾಮಾಜಿಕ ಲಿಂಗ :** ಸಾಮಾಜಿಕ ಲಿಂಗವೆಂಬುದು ಸ್ತ್ರೀಯರು ಮತ್ತು ಪುರುಷರ ಬಗೆಗಿನ ಪ್ರತಿಮೆಗಳು ಹಾಗೂ ನಿರೀಕ್ಷೆಗಳ ಸಂಬಂಧವಾಗಿ ರಚಿಸಲಾದ ಸಾಂಸ್ಕೃತಿಕ ವಿಚಾರಗಳಾಗಿರುತ್ತವೆ.

**ಲಿಂಗ ಪೂರ್ವಗ್ರಹಗಳು :** ಸಾಮಾಜಿಕ ಲಿಂಗದ ಬಗ್ಗೆ, ಅಂದರೆ ಸ್ತ್ರೀಯರ ಅಥವಾ ಪುರುಷರ ಸಮೂಹದ ಬಗ್ಗೆ ಜನರು ಹೊಂದಿರಬಹುದಾದ ಪೂರ್ವನಿರ್ಧಾರಿತ ಅಭಿಪ್ರಾಯಗಳನ್ನು ಲಿಂಗ ಪೂರ್ವಗ್ರಹಗಳು ಎಂದೆನ್ನಬಹುದು.

**ಲಿಂಗ ಪಡಿಯಚ್ಚುಗಳು :** ಈ ಪರಿಕಲ್ಪನೆಯು ಒಂದು ಸಮೂಹ ಅಥವಾ ಒಂದು ವರ್ಗದ ಜನರ ಬಗೆಗಿನ ಪೂರ್ವಗ್ರಹಪೀಡಿತ ಸಾಮಾನ್ಯೀಕರಣಗಳ ಕಂತೆಯಾಗಿದ್ದು ಅದು ಅನುಕೂಲಕರವಾಗಿ ಉತ್ಪ್ರೇಕ್ಷಿತವಾಗಿ ಹಾಗೂ ಅತಿ ಸರಳೀಕೃತವಾಗಿರುತ್ತದೆ.

**ಲಿಂಗತ್ವ/ಲೈಂಗಿಕ ಅಲ್ಪಸಂಖ್ಯಾತರು (ಟ್ರಾನ್ಸ್‌ಜೆಂಡರ್) ಎಂದರೆ ಯಾರು**?

1. ಯಾರು ತಮ್ಮ ಜೈವಿಕ ಲಿಂಗಕ್ಕೆ ವಿರುದ್ಧವಾದ ವರ್ತನೆಯನ್ನು ಹೊಂದಿರುವವರೇ ಲೈಂಗಿಕ ಅಲ್ಪಸಂಖ್ಯಾತರು.
2. ಸ್ತ್ರೀ–ಪುರುಷರಿಗಿಂತ ಭಿನ್ನವಾದ ಲೈಂಗಿಕ ವರ್ತನೆಯನ್ನು ಹೊಂದಿರುವ ಜನ ಸ್ವಲ್ಪವಿದ್ದರೆ ಅಂತಹವರನ್ನು ಲೈಂಗಿಕ ಅಲ್ಪಸಂಖ್ಯಾತರು ಎಂದು ಕರೆಯಬಹುದು.
3. ಹುಟ್ಟುವಾಗ ದೈಹಿಕವಾಗಿ ಗಂಡಾಗಿ ಹುಟ್ಟಿ ಭಾಗಶಃ ಅಥವಾ ಪೂರ್ತಿಯಾಗಿ ಮಹಿಳೆಯರಾಗಿ ಗುರುತಿಸಿಕೊಳ್ಳಲು ಇಚ್ಛಿಸುವವರು ಮತ್ತು ದೈಹಿಕವಾಗಿ ಹೆಣ್ಣಾಗಿ ಹುಟ್ಟಿ ಭಾಗಶಃ ಅಥವಾ ಪೂರ್ತಿ ಪುರುಷರಾಗಿ ಗುರುತಿಸಿಕೊಳ್ಳಲು ಇಚ್ಛಿಸಿಕೊಳ್ಳುವವರನ್ನು ಲೈಂಗಿಕ ಅಲ್ಪಸಂಖ್ಯಾತರು ಎಂದು ಕರೆಯಬಹುದು.
4. ಲೈಂಗಿಕ ಅಲ್ಪಸಂಖ್ಯಾತರು ಒಂದು ಸಮುದಾಯವಾಗಿದ್ದು, ಇವರ ಲಿಂಗ ಗುರುತಿಸುವಿಕೆ, ಲೈಂಗಿಕ ದೃಷ್ಟಿಕೋನ, ಆಚರಣೆಗಳು, ವರ್ತನೆಗಳು ಎಲ್ಲವೂ ಸಮಾಜದಲ್ಲಿನ ಸ್ತ್ರೀ–ಪುರುಷರಿಗಿಂತ ವಿಭಿನ್ನವಾಗಿರುತ್ತದೆ.

**ಟ್ರಾನ್ಸ್‌ಜೆಂಡರ್ಸ್‌ನಲ್ಲಿರುವ ವಿಧಗಳು**

ಟ್ರಾನ್ಸ್‌ಜೆಂಡರ್ ಸಮುದಾಯದಲ್ಲಿ ಸಾಕಷ್ಟು ವಿಧಗಳಿವೆ. ಅವುಗಳಲ್ಲಿ ಮಂಗಳಮುಖಿಯರ ಸಮುದಾಯವೂ ಒಂದು.

1. ಟ್ರಾನ್ಸ್ ಮೆನ್ (ಹೆಣ್ಣಾಗಿ ಹುಟ್ಟಿ ಗಂಡಾದವರು)
2. ಟ್ರಾನ್ಸ್ ವುಮೆನ್ (ಗಂಡಾಗಿ ಹುಟ್ಟಿ ಹೆಣ್ಣಾದವರು)
3. ಮಂಗಳಮುಖಿಯರು
4. ಕೋಥಿಗಳು
5. ಹಿಜ್ರಾಗಳು
6. ಜೋಗಪ್ಪಗಳು ಮುಂತಾದವು.

**ಲೈಂಗಿಕ ಅಲ್ಪಸಂಖ್ಯಾತರ ವಿಧಗಳು**

ಲೈಂಗಿಕ ಅಲ್ಪಸಂಖ್ಯಾತ ಸಮುದಾಯದಲ್ಲಿ ನಾವು ಹಲವು ವಿಧವಾದ ಒಳಸಮೂಹಗಳನ್ನು ಕಾಣಬಹುದಾಗಿದೆ. ಅವುಗಳನ್ನು ಈ ಕೆಳಗೆ ವಿವರಿಸಲಾಗಿದೆ.

1. **ಮಹಿಳಾಸಲಿಂಗಿಗಳು (ಲೆಸ್ಬಿಯನ್ಸ್):** ಹೆಣ್ಣಾಗಿಹುಟ್ಟಿ ಮತ್ತೊಂದು ಹೆಣ್ಣಿನಿಂದ ಆಕರ್ಷಿತವಾಗುವ ಮತ್ತು ಆಕೆಯೊಡನೆ ದೈಹಿಕ ಸಂಪರ್ಕವಿಟ್ಟುಕೊಳ್ಳಲಿಚ್ಛಿಸುವವರೇ ಮಹಿಳಾ ಸಲಿಂಗಿಗಳು.
2. **ಪುರುಷಸಲಿಂಗಿಗಳು (ಗೇ):** ಗಂಡಾಗಿ ಹುಟ್ಟಿ ಮತ್ತೊಂದು ಗಂಡಿನಿಂದ ಆಕರ್ಷಿತವಾಗುವ ಮತ್ತು ಆತನೊಡನೆ ದೈಹಿಕ ಸಂಪರ್ಕವಿಟ್ಟುಕೊಳ್ಳಲಿಚ್ಛಿಸುವವರೇ ಪುರುಷ ಸಲಿಂಗಿಗಳು.
3. **ಉಭಯಲಿಂಗಿಗಳು (ಬೈಸೆಕ್ಸುವಲ್ಸ್):** ಇವರು ಎರಡೂ ಲಿಂಗದವರಿಂದಲೂ ಆಕರ್ಷಿತವಾಗುತ್ತಾರೆ ಮತ್ತು ಇಬ್ಬರೊಂದಿಗೂ ದೈಹಿಕ ಸಂಪರ್ಕ ಹೊಂದಲು ಬಯಸುತ್ತಾರೆ.

4. **ಮಂಗಳಮುಖಿಯರು (ಟ್ರಾನ್ಸ್‌ಸೆಕ್ಷುವಲ್ಸ್):** ಇವರು ಭಾಗಶಃ ಅಥವಾ ಪೂರ್ಣವಾಗಿ ತಮ್ಮ ಜೈವಿಕ ಲಿಂಗಕ್ಕೆ ವಿರುದ್ಧವಾದ ವರ್ತನೆಯನ್ನು ಹೊಂದಿರುತ್ತಾರೆ. ಇವರಲ್ಲೂ ಸಹ ಎರಡು ವಿಧಗಳಿವೆ. ಅಂದರೆ ಲಿಂಗ ಪರಿವರ್ತಿಸಿಕೊಂಡವರು ಮತ್ತು ಲಿಂಗ ಪರಿವರ್ತಿಸಿಕೊಳ್ಳದವರು (ಕೋಥಿಗಳು). ಲಿಂಗ ಪರಿವರ್ತನೆ ಮಾಡಿಕೊಂಡವರಲ್ಲಿ ಹೆಣ್ಣಿನಿಂದ ಗಂಡಾದವರು ಮತ್ತು ಗಂಡಿನಿಂದ ಹೆಣ್ಣಾದವರನ್ನು ಕಾಣಬಹುದು.

**ಭಾರತದಲ್ಲಿ ಮಂಗಳಮುಖಿಯರ ಜನಸಂಖ್ಯೆ**

ಭಾರತದಲ್ಲಿ ಮಂಗಳಮುಖಿಯರ ಅಸ್ತಿತ್ವ ಮೊದಲಿನಿಂದ ಇದ್ದರೂ ಸಹ ಅವರನ್ನು ಭಾರತ ಸರ್ಕಾರ ಜನಗಣತಿಯಲ್ಲಿ ಗಣತಿಗೆ ತೆಗೆದುಕೊಂಡಿದ್ದು 2011 ರಲ್ಲಿ. ಈ ಜನಗಣತಿಯ ಪ್ರಕಾರ ಭಾರತದಲ್ಲಿ ಒಟ್ಟು 4.88 ಲಕ್ಷ ಮಂಗಳಮುಖಿಯರಿದ್ದಾರೆ ಎಂಬುದು ತಿಳಿದುಬಂದಿದೆ. ಅದರಲ್ಲಿ ಭಾರತದ 5 ಪ್ರಮುಖ ಮಹಾನಗರಗಳಲ್ಲಿ (ಮುಂಬೈ, ದೆಹಲಿ, ಕಲ್ಕತ್ತಾ, ಚೆನ್ನೈ ಮತ್ತು ಬೆಂಗಳೂರು) ಮಂಗಳಮುಖಿಯರ ಸಂಖ್ಯೆ ಹೆಚ್ಚಾಗಿದೆ ಎಂಬುದು ತಿಳಿದುಬಂದಿದೆ. (2021ರ ಜನಗಣತಿ ಇನ್ನೂ ನಡೆದಿಲ್ಲವಾದ್ದರಿಂದ ಪ್ರಸ್ತುತ ಮಾಹಿತಿಯನ್ನು ಅಧಿಕೃತವಾಗಿ ನೀಡಲು ಸಾಧ್ಯವಾಗಿಲ್ಲ).

**ಲೈಂಗಿಕ ಅಲ್ಪಸಂಖ್ಯಾತ ಸಮುದಾಯವಾದ ಮಂಗಳಮುಖಿಯರ ಸಮಸ್ಯೆಗಳು ಮತ್ತು ಸವಾಲುಗಳು**

ಲೈಂಗಿಕ ಅಲ್ಪಸಂಖ್ಯಾತರ ಬಗ್ಗೆ ಪೂರ್ವಗ್ರಹಗಳನ್ನು ಹೊಂದಿರುವ ಸಮಾಜ ಈ ಸಮುದಾಯಕ್ಕೆ ಏನನ್ನು ಕೊಟ್ಟಿದೆ ಎನ್ನುವುದನ್ನು ಇಲ್ಲಿ ನಾವು ಗಂಭೀರವಾಗಿ ಚಿಂತಿಸಬೇಕಾಗಿದೆ. ಟ್ರಾನ್ಸ್‌ಜೆಂಡರ್‌ಗಳು ಅನೇಕ ಸವಾಲುಗಳನ್ನು ಎದುರಿಸುತ್ತಾರೆ. ಪ್ರಮುಖವಾಗಿ ಕುಟುಂಬ, ಸಾರ್ವಜನಿಕರು, ಸಮುದಾಯ ಮತ್ತು ಸಮಾಜ, ಕಾನೂನು ಮತ್ತು ಪೊಲೀಸರು, ಆರೋಗ್ಯ ಮತ್ತು ವೈದ್ಯಕೀಯ ವ್ಯವಸ್ಥೆ, ಜೀವನೋಪಾಯ ಮತ್ತು ಉದ್ಯೋಗ, ಶಿಕ್ಷಣ, ನಿವೇಶನ ಮತ್ತು ಮನೆ, ಸಾಮಾಜಿಕ ಹಕ್ಕುಗಳಿಗೆ ಸಂಬಂಧಿಸಿದಂತೆ ಇವರು ಅನೇಕ ಸವಾಲುಗಳನ್ನು ಎದುರಿಸುತ್ತಿರುವುದು ಕಂಡು ಬರುತ್ತದೆ.

**ಕುಟುಂಬದ ಅಸಮ್ಮತಿ ಮತ್ತು ತಾರತಮ್ಯ:** ಹದಿಹರೆಯದ ಹಂತವನ್ನು ತಲುಪಿದಾಗ ಮನೆಗಳಲ್ಲಿ ಹಲವಾರು ರೀತಿಯ ತಿರಸ್ಕಾರ ಮತ್ತು ತಾರತಮ್ಯವನ್ನು ಎದುರಿಸುತ್ತಾರೆ.ಗೌರವವಿಲ್ಲ: ಸಾಮಾನ್ಯವಾಗಿ ಸಿಗುವ ಗೌರವ ಹಾಗೂ ಕುಟುಂಬದ ಸದಸ್ಯರಾಗಿ ವಹಿಸಬೇಕಾದ ಪಾತ್ರಗಳನ್ನು ನಿರಾಕರಿಸಲಾಗುತ್ತದೆ. ಉದಾಹರಣೆಗೆ ಮನೆಯಲ್ಲಿ ನಡೆಯುವ ಮದುವೆ ಸಮಾರಂಭದ ಕುರಿತು ಅವರೊಂದಿಗೆ ಸಮಾಲೋಚಿಸುವುದಿಲ್ಲ. ಧಾರ್ಮಿಕ ಅಥವಾ ಇತರೆ ಆಚರಣೆಗಳಲ್ಲಿ ಸೂಕ್ತ ಸ್ಥಾನವನ್ನು ನೀಡುವುದಿಲ್ಲ. ಮಾನವಹಕ್ಕುಗಳ ಉಲ್ಲಂಘನೆ: ಥಳಿಸುವುದು, ಊಟ ನೀಡದಿರುವುದು ಸಾಮಾನ್ಯವಾಗಿ ಯಾವಾಗಲೂ ಗೃಹಬಂಧನದಲ್ಲಿಡಲಾಗುತ್ತದೆ. ಕೋಥಿಗಳ ಬಲವಂತದಮದುವೆ ಕುರಿತುಮಾತನಾಡುವುದು. ಬದಲಾಗಬೇಕೆಂಬ ಒತ್ತಡ: ಸ್ವಾತಂತ್ರ್ಯ, ಪ್ರೀತಿಯ ತೀವ್ರ ಕೊರತೆ, ಭೌತಿಕ (ವಸತಿಯ ಹಕ್ಕನ್ನು ನಿರಾಕರಿಸಲಾಗಿದೆ) ಹಾಗೂ ಮಾನಸಿಕ ಅವಕಾಶಗಳ ಕೊರತೆ ಅವರಲ್ಲಿ ಎದ್ದು ಕಾಣುತ್ತದೆ.

**ಸಾರ್ವಜನಿಕರು:** ಆಸ್ಪತ್ರೆಗಳು, ಶೌಚಾಲಯಗಳು, ಬಸ್ಸುಗಳು ಇತ್ಯಾದಿಯಂತಹ ಸಾರ್ವಜನಿಕ ಉಪಯೋಗ ಅಥವಾ ಸಾರ್ವಜನಿಕ ಸ್ಥಳಗಳ ಬಳಕೆಯ ಸಂದರ್ಭದಲ್ಲಿ ಕಳಂಕ, ತಾರತಮ್ಯ ಅನುಭವಿಸುವುದು ಸಾಮಾನ್ಯ. ನಿರ್ದಿಷ್ಟವಾಗಿ ಟ್ರಾನ್ಸ್‌ಜೆಂಡರ್‌ಗಳ ಬಳಕೆಗೆಂದೇ ಇರುವ ಸ್ಥಳಗಳೇ ಇಲ್ಲ. ಹೋಟೆಲು, ಸಿನಿಮಾ ಹಾಲ್‌ಗಳು ಇತ್ಯಾದಿ ಸೇರಿದಂತೆ ಪ್ರತಿಯೊಂದು ಸ್ಥಳದಲ್ಲಿಯೂ ಅವರು ತಾರತಮ್ಯವನ್ನು ಅನುಭವಿಸುತ್ತಾರೆ. ಇಲ್ಲೆಲ್ಲ ವರ್ಗ ಹಿನ್ನೆಲೆಯ ಪ್ರಭಾವ ಹೆಚ್ಚು.ಕೆಲಸ ಮಾಡುವ ಸ್ಥಳಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಅವರನ್ನು ತಮಾಷೆಯ ವಸ್ತುಗಳಂತೆ ಕಾಣುತ್ತಾರಲ್ಲದೆ ಸಾರ್ವಜನಿಕ ಬೆಂಬಲದ ಕೊರತೆಯೂ ಇದೆ.ಸಮಾಜದ ಭಾಗವಾಗಿ, ಕೊಡುಗೆ ಸಲ್ಲಿಸುವವರಾಗಿ ಯಾವ ಸಮ್ಮತಿಯೂ ಅವರಿಗಿಲ್ಲ. ಅವರನ್ನು ಮನುಷ್ಯ ಜೀವಿಗಳು' ಎಂದೂ ಪರಿಗಣಿಸುವುದಿಲ್ಲ.ಅವರಿಗೆಸಮಾನ ಅವಕಾಶಗಳಿಲ್ಲ: ಲಿಂಗ ಮತ್ತು ಲೈಂಗಿಕ ಅಭಿವ್ಯಕ್ತಿಗೆ ಅತಿ ಸೀಮಿತ ಸ್ವಾತಂತ್ರ್ಯವಿರುವ ಟ್ರಾನ್ಸ್‌ಜೆಂಡರ್‌ಗಳಿಗೆ ತೊಂದರೆಯಾದಾಗ ಬೆಂಬಲ ನೀಡಲು ಸಾರ್ವಜನಿಕರು ಮುಂದೆಬರುವುದಿಲ್ಲ.

**ಸಮುದಾಯ:** ಲೈಂಗಿಕ ಅಲ್ಪಸಂಖ್ಯಾತರ ಸಮುದಾಯದ ಒಳಗಡೆಯೂ ಸಮಾನತೆ ಎಂಬುದು ದೂರದ ಮಾತಾಗಿದೆ. ಭಾಷೆ, ಲಿಂಗ, ವರ್ಗ, ಸಾಮರ್ಥ್ಯ ಇತ್ಯಾದಿಗಳನ್ನು ಆಧರಿಸಿದ ಶ್ರೇಣೀಕರಣವಿದೆ.ಹಿಜ್ರಾ ವ್ಯವಸ್ಥೆಯೊಳಗಡೆಯೇ ಹಿಂಸೆಹಾಗೂ ಪ್ರಾಧಾನ್ಯತೆಯ ಅಂಶಗಳಿವೆ.ಶ್ರೇಣಿಯಲ್ಲಿ ಮೇಲಿರುವ ಇತರರಿಂದ ಸಮುದಾಯದ ಸದಸ್ಯರುಗಳ ಮೇಲೆ ದೈಹಿಕ ಹಿಂಸೆ ನಡೆಯುತ್ತಿದೆ. ಟ್ರಾನ್ಸ್‌ಜೆಂಡರ್ ಎಂಬುದರ ಜೊತೆಗೆ ಬೇರೆಯವರಿಗಿಂತ ಶ್ರೇಷ್ಠ ಎಂಬ ಕಲ್ಪನೆಯ ಆಧಾರದ ಮೇಲೆ ಲೈಂಗಿಕ ಅಲ್ಪಸಂಖ್ಯಾತರೊಳಗೂ ವಿಭಜನೆಗಳಿವೆ.

**ಸಮಾಜ:** ಸಮಾಜದ ಅಸಮ್ಮತಿಯಿಂದಾಗಿ ಸಾರ್ವಜನಿಕ ಸ್ಥಳಗಳನ್ನು ಬಳಸಿಕೊಳ್ಳಲು ಅಸಮರ್ಥರಾಗುತ್ತಾರೆ. ಅವುಗಳ ಬಳಕೆಯೂ ಕಷ್ಟಸಾಧ್ಯವಾಗಿದೆ.ಲಿಂಗ ಮತ್ತು ಲೈಂಗಿಕ ಅಭಿವ್ಯಕ್ತಿಗೆ ಸ್ವಾತಂತ್ರ್ಯವಿಲ್ಲ: ಸಾಧ್ಯವಾದಷ್ಟು 'ಸಾಮಾನ್ಯ'ಲಿಂಗದವರಂತೆ ಇದ್ದಾಗ ಮಾತ್ರ ಸಮ್ಮತಿ ಸಿಗುವುದು.ಶಾಲಾ ಪ್ರಮಾಣ ಪತ್ರ ಅಥವಾ ಜನನ ಪ್ರಮಾಣ ಪತ್ರದಲ್ಲಿ ಸೂಚಿಸಿರುವ ಲಿಂಗದ ನಿರೀಕ್ಷೆಗಳಿಗೆ ತಕ್ಕಂತೆ ಅವರು ಕಾಣುವುದಿಲ್ಲ ಎಂಬ ಕಾರಣಕ್ಕೆ ಚುನಾವಣೆಯ ಗುರುತಿನ ಚೀಟಿ, ಪಡಿತರ ಚೀಟಿ ಇತ್ಯಾದಿ ಸಾಮಾಜಿಕ ಹಕ್ಕುದಾರಿಕೆಯನ್ನೂ ನಿರಾಕರಿಸಲಾಗಿದೆ.

**ಪೊಲೀಸ್:** ಸಮುದಾಯದ ಸದಸ್ಯರ ಮೇಲೆ ಪೊಲೀಸರಿಂದ ಲೈಂಗಿಕ ದೌರ್ಜನ್ಯ ನಿಂದನೆಯಂತಹ ಹಲವಾರು ರೀತಿಯ ಹಿಂಸೆಗಳಾಗುತ್ತವೆ. ಪ್ರಕರಣವು ದಾಖಲು ಆಗದೇ ಹಿಂಸೆಯಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಹಣ ಕೀಳುತ್ತಾರೆ. ಕಳ್ಳತನ ಮಾಡುತ್ತಾರೆ. ಕೊಲೆ ಮಾಡುತ್ತಾರೆ ಎಂದು ಸುಳ್ಳು ಕೇಸುಗಳನ್ನು ಹಾಕಲಾಗುತ್ತದೆ.ಕಿರುಕುಳದ ಬದಲಿಗೆ ಪೊಲೀಸರು ನಿಯಮಿತವಾಗಿ ಹಣ ನೀಡಬೇಕೆಂದು ಒತ್ತಾಯಿಸುತ್ತಾರೆ. ಕೆಲವೊಮ್ಮೆ ಉಚಿತ ಲೈಂಗಿಕ ಸೇವೆಯನ್ನೂ ಕೇಳುತ್ತಾರೆ.ಇಡೀ ಸಮುದಾಯವನ್ನು ವಿಶೇಷವಾಗಿ ಹಿಜ್ರಾಗಳನ್ನು ಅಪರಾಧಿಗಳಂತೆ ನಡೆಸಿಕೊಳ್ಳುತ್ತಾರೆ ಮತ್ತು ಸ್ಥಳೀಯ ಅಪರಾಧಿಗಳಿಗಾಗಿ ಅವರನ್ನು ದೂಷಿಸುತ್ತಾರೆ ಮತ್ತು ಆ ಅಪರಾಧದೊಂದಿಗೆ ಸಂಪರ್ಕ ಕಲ್ಪಿಸುತ್ತಾರೆ.ಗೂಂಡಾಗಳಿಂದಾಗುವ ಹಿಂಸೆಯ ವಿರುದ್ಧ ರಕ್ಷಣೆ ನೀಡುವುದಿಲ್ಲ. ಗೂಂಡಾಗಳ ವಿರುದ್ಧವಾಗಲಿ ಅಥವಾ ಇನ್ಯಾವುದೇ ವಿಷಯ ಕುರಿತಾಗಲಿ ದೂರು ನೀಡಿದರೆ ದಾಖಲಿಸುವುದಿಲ್ಲ. ಗಂಭೀರವಾಗಿ ಪರಿಗಣಿಸುವುದಿಲ್ಲ. ಕಿರುಕುಳ ಬೇರೆ ರೀತಿಯಲ್ಲೂ ನಡೆಯುತ್ತವೆ. ಉದಾಹರಣೆಗೆ, ರೈಲಿನಲ್ಲಿ ಪ್ರಯಾಣಿಸುವಾಗ ಅವರ ಟ್ರಾನ್ಸ್‌ಜೆಂಡರ್ ಸ್ಥಾನಕ್ಕೆ ಸೂಕ್ತವಾದ ಗುರುತಿನ ಪತ್ರಗಳಿಲ್ಲವೆಂಬ ಕಾರಣಕ್ಕೆ ಪೊಲೀಸರಿಂದ ಹಿಂಸೆಗೆ ಗುರಿಯಾಗುತ್ತಾರೆ.ಬೀದಿಗಳಲ್ಲಿ ಹೆಚ್ಚು ಸಮಯ ಕಳೆಯುತ್ತಾರೆಂಬ ಕಾರಣಕ್ಕೆ ಸಾರ್ವಜನಿಕ

ಉಪದ್ರವದ ಆರೋಪ ಹೊರೆಸಿ ಕೊಂಡೊಯ್ಯುತ್ತಾರೆ.

**ಕಾನೂನು:** ಐ.ಪಿ.ಸಿ 377 ರಂತಹ ಕಾನೂನುಗಳನ್ನು ಟ್ರಾನ್ಸ್‌ಜೆಂಡರ್ ಜನರನ್ನು ಬೆದರಿಸಲು, ಹಣ ಕೀಳಲು, ಹಿಂಸಿಸಲು, ಅವರ ಹಕ್ಕುಗಳನ್ನು ನಿರಾಕರಿಸಲು ಬಳಸಲಾಗುತ್ತದೆ.ಟ್ರಾನ್ಸ್‌ಜೆಂಡರ್ ಜನರಲ್ಲಿ ಹೆಚ್ಚಿನವರು ಲೈಂಗಿಕ ಕಾರ್ಯಕರ್ತರಾಗಿರುವುದರಿಂದ ಅವರ ವಿರುದ್ಧ ಐ.ಟಿ.ಪಿ (ಖಟಟಿಠಿಡಿಚಿಟ ಖಿಡಿಚಿಜಿಜಿಜಿಇಟಿರ ಕಡಿಜತಜಟಿಣುಠಟಿ) ಆ್ಯಕ್ಟನ್ನು ಬಳಸಿ ದಂಡಿಸುತ್ತಾರೆ. ಲೈಂಗಿಕ ಕಾರ್ಯಕರ್ತರಲ್ಲದ ಹಿಜ್ರಾ ಮತ್ತು ಕೋಥಿಗಳನ್ನು ದಂಡಿಸಲು ಈ ಕಾನೂನನ್ನು ಬಳಸಲಾಗುತ್ತದೆ.ಅವರಿಗೆ ಕೋರ್ಟುಗಳ ಪ್ರವೇಶವನ್ನೂ ನಿರಕಾರಿಸಲಾಗುತ್ತದೆ. ಇಚ್ಛಾನುಸಾರವಾಗಿ ಕೇಸುಗಳನ್ನು ಅವರ ವಿರುದ್ಧವಾಗಿ ತೀರ್ಮಾನಿಸಲಾಗುತ್ತದೆ.ಕಾನೂನಿನಲ್ಲಿರುವ ಪೂರ್ವಾಗ್ರಹದಿಂದ ಮೂಲಭೂತ ಹಕ್ಕುಗಳನ್ನು ಪಡೆಯುವುದು ದುಃಸ್ಸಾಧ್ಯವಾಗಿದೆ. ಅವರ ಮೇಲೆ ಪದೆಪದೇ ದಂಡ ವಿಧಿಸಲಾಗುವುದಲ್ಲದೆ ಭಿಕ್ಷುಕರ ಕಾಲೋನಿಗೆ ಅವರನ್ನು ಬಲವಂತದಿಂದ ಒಯ್ಯಲಾಗುತ್ತದೆ.

**ಆರೋಗ್ಯ ಸೇವಾ ಕೇಂದ್ರ:** ಸಾರ್ವಜನಿಕ ಆರೋಗ್ಯ ವ್ಯವಸ್ಥೆಗಳಲ್ಲಿ ಮಿತಿ ಮೀರಿದ ತಾರತಮ್ಯವಿದೆ. ಆಸ್ಪತ್ರೆಗಳಲ್ಲಿ ಆಯಾಗಳಿಂದ ಹಿಡಿದು ವೈದ್ಯರವರೆಗೂ ಟ್ರಾನ್ಸ್‌ಜೆಂಡರ್ ಸಮುದಾಯಗಳ ಬಗ್ಗೆ ಅಸೂಕ್ಷ್ಮತೆ ಇದೆ.ಅವರ ಪರಿಸ್ಥಿತಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದಿಲ್ಲ. ಆಸ್ಪತ್ರೆಯ ಸಿಬ್ಬಂಧಿಗೆ ವಿಷಯದ ಕುರಿತು ತಿಳುವಳಿಕೆ ಇಲ್ಲ. ಹಾಗಾಗಿ ಟ್ರಾನ್ಸ್‌ಜೆಂಡರ್‌ಗಳು ಅವಮಾನಕ್ಕೆ ಈಡಾಗುತ್ತಾರಲ್ಲದೆ ಸೂಕ್ತ ಗಮನ, ಆರೈಕೆಯನ್ನು ಪಡೆಯುವುದಿಲ್ಲ. ಅವರಿಗೆ ಔಷಧ ಸೌಲಭ್ಯಗಳ ಕೊರತೆಯೂ ಇದೆ.ಎ.ಸಿ.ಟಿ.ಸಿ ಸೌಲಭ್ಯಗಳಿಗೆ ಮಿತಿ ಇದೆ. ಹೆಚ್.ಐ.ವಿ. ಇರುವವರನ್ನು ಕಳಂಕಿತರನ್ನಾಗಿಸಿ, ಗೌಪ್ಯತೆಯನ್ನು ಉಲ್ಲಂಘಿಸಲಾಗುತ್ತದೆ. ಚಿಕಿತ್ಸೆಯ ಸಂದರ್ಭದಲ್ಲಿ ಹೆಚ್.ಐ.ವಿ. ಇರುವ ವ್ಯಕ್ತಿಗಳ, ವಿಶೇಷವಾಗಿ ಟ್ರಾನ್ಸ್‌ಜೆಂಡರ್‌ಗಳ ಆತ್ಮ ಘನತೆ/ಆತ್ಮ ಗೌರವವನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಸಾರ್ವಜನಿಕ ಆರೋಗ್ಯ ವ್ಯವಸ್ಥೆಯೊಳಗಡೆಯೇ ಎ.ಆರ್.ಟಿ/ಎ.ಆರ್.ವಿ. ವ್ಯವಸ್ಥೆಗಳು ಸಮಸ್ಯೆಯಿಂದ ಕೂಡಿವೆ. ಸಾಂತ್ವನ ಸಲಹೆಗಾರರು ಸೂಕ್ಷ್ಮತೆಯಿಂದ ವರ್ತಿಸುವುದಿಲ್ಲ. ರೋಗಿಗಳಿಗೆ ಸೂಕ್ತ ಮಾಹಿತಿಯನ್ನು ನೀಡುವುದಿಲ್ಲ.ಹೆಚ್.ಐ.ವಿ. ಸೋಂಕಿತ ವ್ಯಕ್ತಿಗಳ, ವಿಶೇಷವಾಗಿ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ಆರೈಕೆ ಮತ್ತು ಬೆಂಬಲವನ್ನು ತುಂಬಾ ಕಡೆಗಣಿಸಲಾಗಿದೆ. ಎಸ್.ಆರ್.ಎಸ್ (ಲಿಂಗ ಮರುರಚನೆ ಶಸ್ತ್ರಚಿಕಿತ್ಸೆ) ಮತ್ತು ಹಾರ್ಮೋನ್ ಬದಲಾವಣೆ ಚಿಕಿತ್ಸೆಗಳ ಅಗತ್ಯಹೆಚ್ಚಿದೆ. ಆದರೆ ಕೆಲವೇ ಕೆಲವು ಸರ್ಕಾರಿ ಆಸ್ಪತ್ರೆಗಳಲ್ಲಿ ಅಂತಹ ವ್ಯವಸ್ಥೆ ಇದೆ. ತಕ್ಕ ಪರಿಣಿತರಿದ್ದರೂ ಸೇವೆಯನ್ನುಒದಗಿಸುವುದಿಲ್ಲ.ಖಾಸಗಿ ಆರೋಗ್ಯ ವ್ಯವಸ್ಥೆ ತುಂಬಾ ದುಬಾರಿಯಾಗಿದ್ದು ಅದೂ ಸಹ ಟ್ರಾನ್ಸ್‌ಜೆಂಡರ್‌ಗಳ ವಿಷಯದಲ್ಲಿ ಸೂಕ್ಷ್ಮವಾಗಿಲ್ಲ.

**ಜೀವನೋಪಾಯ ಮತ್ತು ಉದ್ಯೋಗ:** ರೂಢಿಗತ ಲಿಂಗಸಂಬಂಧಿ ವರ್ತನೆಗೆ ಪೂರಕವಾಗಿಲ್ಲವೆಂಬ ಕಾರಣಕ್ಕೆ ಅವರಿಗಿರುವ ಉದ್ಯೋಗವಕಾಶಗಳು ತುಂಬಾ ಕಡಿಮೆ. ಉದ್ಯೋಗಾವಕಾಶ ಇಲ್ಲದಿರುವುದನ್ನು ತಾರತಮ್ಯವೆಂದು ಪರಿಗಣಿಸುವುದೇ ಇಲ್ಲ. ಸಿಕ್ಕಿದ್ದನ್ನು ಮಾಡಿ ಅದನ್ನು ಉಳಿಸಿಕೊಳ್ಳಬೇಕೆಂದೇ ಎಲ್ಲರೂ ಭಾವಿಸುತ್ತಾರೆ. ಲಿಂಗ ಅನನ್ಯತೆ ಎಂಬುದು ಎಂತಹ ಮೂಲಭೂತ ವಿಷಯವೆಂಬುದನ್ನು ಅರ್ಥಮಾಡಿಕೊಳ್ಳುವುದು ಬಹಳ ಕಡಿಮೆ.ತಮ್ಮ ಲಿಂಗ ಮತ್ತು ಲೈಂಗಿಕ ಅನನ್ಯತೆಯನ್ನು ಗುಟ್ಟಾಗಿಟ್ಟುಕೊಂಡು ಕೆಲಸ ಪಡೆದುಕೊಂಡರೆ ಎಲ್ಲಿ ರಟ್ಟಾಗಿಬಿಡುವುದೋ ಎಂಬ ಭೀತಿಯಲ್ಲೇ ಇರುತ್ತಾರೆ. ಕೆಲಸ ಸಿಕ್ಕರೂ ಸಹ ದ್ವೇಷದ ವಾತಾವರಣದಿಂದಾಗಿ ಕೆಲಸ ಉಳಿಸಿಕೊಳ್ಳುವುದು ದುಃಸ್ಸಾಧ್ಯವಾಗುತ್ತದೆ. ಬಡತನದ ಹಿನ್ನೆಲೆಯಿಂದ ಬಂದವರಾದ್ದರಿಂದ ಜೀವನೋಪಾಯಗಳೇ ಸೀಮಿತವಾಗಿದೆ.ಕೆಲವರಿಗೆ ಅಧಿಕೃತ ಅರ್ಹತೆಗಳಿದ್ದರೂ ತಮ್ಮ ಅನನ್ಯತೆಯಿಂದಾಗಿ ವಲಸೆ ಹೋಗುವುದರಿಂದ ಹೊಸ ಜಾಗದಲ್ಲಿ ಭಾಷೆಯು ತೊಡಕಾಗುತ್ತದೆ. ಸರ್ಕಾರಿ ಉದ್ಯೋಗಗಳನ್ನು ಪಡೆದುಕೊಳ್ಳುವ ಸಾಧ್ಯತೆಗಳೇ ಅವರಿಗಿಲ್ಲ. ಬಹುಪಾಲ ಜನರುಲೈಂಗಿಕ ಕೆಲಸ ಹಾಗೂ ಭಿಕ್ಷೆ ಬೇಡುವುದರಲ್ಲಿ ತೊಡಗಿದ್ದಾರೆ. ಅವೆರಡನ್ನು ಅಪರಾಧಿಕರಣಗೊಳಿಸಿರುವ ಕಾರಣಕ್ಕೆ ಬಹಳ ಸಮಸ್ಯೆಗಳನ್ನು ಅವರು ಎದುರಿಸುತ್ತಾರೆ. ಎಚ್.ಐ.ವಿ/ಏಡ್ಸ್ ಧನಸಹಾಯದಲ್ಲೂ ಲಿಂಗ ಅನನ್ಯತೆಯಿಂದಾಗಿ ತಾರತಮ್ಯ ನಡೆಯುತ್ತದೆ. ಎಷ್ಟೋ ಜನರಿಗೆ ಕನಿಷ್ಟ ವೇತನವೂ ಸಿಗುವುದಿಲ್ಲ. ಅವರಿಗೆ ಹೆಚ್ಚಿನ ಉದ್ಯೋಗಾವಕಾಶಗಳಿಲ್ಲ ಎಂಬ ಕಾರಣವನ್ನೇ ಶೋಷಿಸಲು ಬಳಸಿಕೊಂಡು ಅವರನ್ನು ವಿಧೇಯರನ್ನಾಗಿಸಲಾಗುತ್ತದೆ.

**ಶಿಕ್ಷಣ:** ಶಿಕ್ಷಣ ವ್ಯವಸ್ಥೆಯಲ್ಲಿ ಟ್ರಾನ್ಸ್‌ಜೆಂಡರ್ ವಿಷಯ ಕುರಿತ ತಿಳುವಳಿಕೆಯೇ ಇಲ್ಲ. ಹಾಗಾಗಿ ರೂಢಿಗತಲಿಂಗ ಅನನ್ಯತೆಯೊಂದಿಗೆ ಗುರುತಿಸಿಕೊಳ್ಳಲಾಗದ ಹದಿಹರೆಯದವರನ್ನು ಅಣುಕಿಸುವುದು, ಅವಮಾನಿಸುವುದು, ಸಾಮಾನ್ಯ, ಇದರಿಂದಾಗಿ ಇವರು ಶಾಲೆ ಬಿಡುವುದನ್ನೆ ಆಯ್ಕೆ ಮಾಡಿಕೊಳ್ಳುತ್ತಾರೆ. ಕೌಶಲ್ಯಗಳನ್ನು ಬೆಳೆಸುವ ಸೌಲಭ್ಯಗಳಿಲ್ಲ. ಸೌಲಭ್ಯಗಳಿದ್ದಿದ್ದರೆ ಶಾಲೆ ಬಿಟ್ಟವರು ಬೇರೆ ತರಬೇತಿ ಪಡೆದು ಉತ್ತಮ ಉದ್ಯೋಗವನ್ನು ಪಡೆದುಕೊಳ್ಳಬಹುದಾಗಿತ್ತು.

**ವಸತಿ:** 'ಭಿನ್ನ' ಎಂಬ ಕಾರಣಕ್ಕೆ ಮತ್ತು ಅವರ ವೃತ್ತಿಯ ಕಾರಣಕ್ಕೆ ಟ್ರಾನ್ಸ್‌ಜೆಂಡರ್‌ಗಳಿಗೆ ವಸತಿ ಸೌಲಭ್ಯ ಕಷ್ಟಕರವಾಗಿದೆ. ಅವರು ಅಪರಾಧಿಗಳು ಅಥವಾ ಸಮಾಜಘಾತುಕರೆಂದು ಜನರು ಭಾವಿಸುವುದರಿಂದಾಗಿ ಅವರಿಗೆ ವಾಸಕ್ಕೆ ಮನೆಗಳು ಸಿಗುವುದಿಲ್ಲ. ಮನೆಗಳು ಸಿಗದ ಕಾರಣಕ್ಕೆ ಅವರಲ್ಲಿ ಹೆಚ್ಚು ಹಣ ಕೊಡುವ ಸಾಧ್ಯತೆ ಇರುವವರೂ ಸಹ ಬಡತನದ ಪ್ರದೇಶಗಳಲ್ಲಿಯೇ ಮನೆ ಹುಡುಕಿಕೊಳ್ಳಬೇಕಾಗುತ್ತದೆ.

**ಹಕ್ಕುಗಳು:** ಕಾನೂನುಬದ್ಧವಾಗಿ ಲಿಂಗಬದಲಾವಣೆ ಮಾಡಿಸಿಕೊಳ್ಳುವುದು ಕಷ್ಟಕರವಾಗಿರುವುದರಿಂದ ಮತ್ತು ಅವರನ್ನು ಯೋಗ್ಯ ಪ್ರಜೆಗಳೆಂದು ಪರಿಗಣಿಸಿಲ್ಲವಾದ್ದರಿಂದ ಟ್ರಾನ್ಸ್‌ಜೆಂಡರ್‌ಗಳು ಪಡಿತರ ಚೀಟಿ, ವೃದ್ಧಾಪ್ಯ ವೇತನದಂತಹ ಹಕ್ಕುಗಳನ್ನು ಪಡೆದುಕೊಳ್ಳಲಾಗಿಲ್ಲ.ಮತ ಚಲಾವಣೆಯಂತ ಮೂಲಭೂತ ಹಕ್ಕುಗಳನ್ನೂ ಅವರಿಗೆ ನಿರಾಕರಿಸಲಾಗಿದೆ. ಏಕೆಂದರೆ, ಅವರ ವಾಸ ಮಾಡುವ ಸ್ಥಳಗಳನ್ನು ತೆಗೆದುಹಾಕಿರುವ ಅಥವಾ ಹಿಂದಿನ ದಾಖಲೆಗಳಲ್ಲಿ ನಮೂದಿಸಿರುವುದರೊಂದಿಗೆ ಅವರ ಲಿಂಗ ಅನನ್ಯತೆ ಹೊಂದಿಕೆಯಾಗದ ಕಾರಣಕ್ಕೆ ಈ ಎಲ್ಲಾ ಹಕ್ಕುಗಳನ್ನು ನಿರಾಕರಿಸಲಾಗಿದೆ.

**ಉದ್ದೇಶಗಳು**

1. ಮಂಗಳಮುಖಿಯರ ಕೌಟುಂಬಿಕ ಹಿನ್ನೆಲೆಯನ್ನು ತಿಳಿಯುವುದು.
2. ಮಂಗಳಮುಖಿಯರ ಸಾಮಾಜಿಕ ಅಂತಸ್ತನ್ನು ತಿಳಿಯುವುದು.
3. ಮಂಗಳಮುಖಿಯರ ಶೈಕ್ಷಣಿಕ ಸ್ಥಿತಿಗತಿಯನ್ನು ತಿಳಿಯುವುದು.
4. ಮಂಗಳಮುಖಿಯರ ಆರ್ಥಿಕ ಭದ್ರತೆಯ ಅಂಶವನ್ನು

ಪರಿಶೀಲಿಸುವುದು.

5. ಮಂಗಳಮುಖಿಯರ ಸಾಮಾಜಿಕ ಸಮಸ್ಯೆಗಳನ್ನು ವಿಶ್ಲೇಷಿಸುವುದು. ಮತ್ತು ಅವರ ಪ್ರಸ್ತುತದ ಸ್ಥಿತಿಗತಿಯನ್ನು ತಿಳಿಯುವುದು.

**ಅಧ್ಯಯನ ವಿಧಾನ**

ಈ ಅಧ್ಯಯನಕ್ಕಾಗಿ ಸಮಗ್ರ/ಏಕವಿಷಯಕ/ಘಟಕ ಅಧ್ಯಯನ ಸಂಶೋಧನಾ ವಿಧಾನವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇದೊಂದು ಗುಣಾತ್ಮಕ ಮತ್ತು ವಿವರಣಾತ್ಮಕ ಸಂಶೋಧನೆಯಾಗಿದೆ. ನಾನು ಅಧ್ಯಯನಕ್ಕೆ ಅನುಗುಣವಾಗಿ ಲೈಂಗಿಕ ಅಲ್ಪಸಂಖ್ಯಾತ ಸಮುದಾಯವಾದ ಮಂಗಳಮುಖಿಯರಲ್ಲಿ 15 ಜನ ಮಂಗಳಮುಖಿಯರನ್ನು ಆಯ್ಕೆ ಮಾಡಿಕೊಂಡು, ಉದ್ದೇಶಗಳಿಗನುಗುಣವಾಗಿ ಆಳವಾದ ಅಧ್ಯಯನ ಮಾಡಲಾಗಿದೆ.

**ಮಾಹಿತಿ ಸಂಗ್ರಹಣೆ**

1. ಪ್ರಾಥಮಿಕ ಮಹಿತಿ: ಈ ಮೇಲೆ ಹೇಳಿದಂತೆ ಆಯ್ಕೆ ಮಾಡಿಕೊಂಡಿರುವ ಮಂಗಳಮುಖಿಯರನ್ನು ನೇರವಾಗಿ ಭೇಟಿ ಮಾಡಿ ಸಿದ್ಧವಾಗಿರುವ ಸಂದರ್ಶನ ಕೈಪಿಡಿಯ ಸಹಾಯದಿಂದ ಸಂದರ್ಶಿಸಲಾಗಿದೆ.
2. ಮಾಧ್ಯಮಿಕ ಮಾಹಿತಿ: ಪ್ರೌಢ ಪ್ರಬಂಧಗಳು, ಪುಸ್ತಕಗಳು, ಸರ್ಕಾರಿ ವರಧಿಗಳು, ಸಮೀಕ್ಷೆಗಳು, ಪತ್ರಿಕೆಗಳು, ಲೇಖನಗಳು ಮುಂತಾದವುಗಳ ಮೂಲಕ ಸಂಗ್ರಹಿಸಲಾಗಿದೆ.

**ಫಲಿತಾಂಶ ವಿಶ್ಲೇಷಣೆ**

ಮಂಗಳಮುಖಿಯರು ಸಾಮಾನ್ಯವಾಗಿ ಒಂದೇ ರೀತಿಯ ವರ್ತನೆಗಳನ್ನು ಹೊಂದಿದ್ದರೂ ಸಹ, ಅವರು ಬಂದಿರುವ ಹಿನ್ನೆಲೆಗಳು ಮಾತ್ರ ಬೇರೆ ರೀತಿಯವು. ಹಾಗಾಗಿ ನಾನು ಆಯ್ಕೆ ಮಾಡಿಕೊಂಡಿರುವಂತಹ ಪ್ರತ್ಯೇಕ ಘಟಕಗಳ ಆರ್ಥಿಕ, ಕೌಟುಂಬಿಕ, ಸಾಮಾಜಿಕ, ಶೈಕ್ಷಣಿಕ ಹಿನ್ನೆಲೆಯನ್ನು ಓದಗಿಸಿದ್ದೇನೆ.

**ಕೌಟುಂಬಿಕ ಹಿನ್ನೆಲೆ**

ಭಾರತೀಯ ಸಮಾಜವು ಹಳ್ಳಿಗಳ ನಾಡು. ಇಲ್ಲಿರುವ ಸಾಮಾಜಿಕ ಸಮಸ್ಯೆಗಳಲ್ಲಿ ಬಡತನವೂ ಒಂದು. ಸಾಮಾನ್ಯವಾಗಿ ಲಿಂಗಪರಿವರ್ತನೆ ಮಾಡಿಸಿಕೊಂಡು ಲೈಂಗಿಕಕಾರ್ಯಕರ್ತರಾಗಿರುವವರೆಲ್ಲರ ಸ್ಥಿತಿಯು ಒಂದೇ ಆಗಿರುತ್ತದೆ. ಶ್ರೀಮಂತ ಕುಟುಂಬದಿಂದ ಬಂದು ಮಂಗಳಮುಖಿಯರಾದವರು ಸಾಮಾನ್ಯವಾಗಿ ಲೈಂಗಿಕ ಕಾರ್ಯಕರ್ತರಾಗುವುದಿಲ್ಲ. ಎಂದು ಹೇಳಬಹುದು. ನನ್ನ ಅಧ್ಯಾಯನದ ಪ್ರಕಾರ ಬಹುತೇಕ ಕುಟುಂಬಗಳು ಸಣ್ಣ ಪುಟ್ಟ ಕೂಲಿಗಳ, ವ್ಯಾಪಾರಸ್ಥರ ಕುಟುಂಬದಿಂದ ಬಂದವರು. ಆದರೆ ಬಡವ ಶ್ರೀಮಂತ ಎನ್ನುವುದು ಲಿಂಗದ ಆಸ್ಮಿತೆಯನ್ನು ನಿರ್ಧರಿಸುವುದಿಲ್ಲ ಅದೊಂದು ಜೈವಿಕ ಕ್ರಿಯೆಯಾಗಿದೆ.

ಕೆಲವು ಮಂಗಳಮುಖಿಯರ ಕುಟುಂಬದಲ್ಲಿ ಅವರ ಬಾಲ್ಯದಲ್ಲಿ ಹೆಚ್ಚು ಸ್ವತಂತ್ರ ನೀಡಿದ್ದರೆ, ಮತ್ತೆ ಕೆಲವರ ಕುಟುಂಬದಲ್ಲಿ ಹಿಡಿತವನ್ನು ಸಾಧಿಸಿರುತ್ತಾರೆ. ಸಮಾನ್ಯವಾಗಿ ಇವರ ತಂದೆ ತಾಯಿಯು ಅಶಿಕ್ಷಿತರೇ ಆಗಿರುತ್ತಾರೆ. ಶಿಕ್ಷಿತರಾಗಿದ್ದಾರೆ. ಅದು ಕೇವಲ ಪ್ರಥಾಮಿಕ ಶಿಕ್ಷಣ ಮಾತ್ರ ಎಂದು ಹೇಳಬಹುದು. ಕೆಲವು ಮಂಗಳಮುಖಿಯರು ತಮ್ಮ ಕುಟುಂಬದೊಂದಿಗೆ ಚೆನ್ನಾಗಿದ್ದಾರೆ. ಆದರೆ ಕೇವಲ ಸಂವಹನದಲ್ಲಿ ಮಾತ್ರ, ಯಾರೂ ಸಂಪರ್ಕದಲ್ಲಿಲ್ಲ. ಆದರೆ ಬಹುಪಾಲು ಮಂಗಳಮುಖಿಯರು ಕುಟುಂಬದಿಂದ ದೂರ ಉಳಿದವರೇ ಆಗಿದ್ದಾರೆ. ಒಟ್ಟಾರೆಯಾಗಿ ಎಲ್ಲಾ ಮಂಗಳಮುಖಿಯರು ಕೌಟುಂಬಿಕ ಹಿನ್ನೆಲೆಯು ಬಾಗಶಃ ಒಂದೇ ತೆರನಾಗಿದೆ ಎಂದು ಹೇಳಬಹುದು.

**ಬಾಲ್ಯ**

ಸಾಮಾನ್ಯವಾಗಿ ಮಂಗಳಮುಖಿಯರೆಂದರೆ, ಗಂಡಾಗಿ ಹುಟ್ಟಿ ಹೆಣ್ಣಾಗುವವರು, ಹೆಣ್ಣಾಗಿ ಹುಟ್ಟಿ ಗಂಡಾಗುವವರು. ಇವರ ಜೈವಿಕ ಸ್ಥಿತಿ ಗಂಡಿನ ದೇಹವಾಗಿದ್ದರೂ ಸಹ ಅವರ ನಡೆನುಡಿ, ಕೆಲಸ, ಆಟಗಳು, ಮನಸ್ಥಿತಿ, ಎಲ್ಲವೂ ಸಹ ಹೆಣ್ಣಿನ ವರ್ತನೆಯಂತೆಯೇ ಇರುತ್ತದೆ. ಕೂದಲು ಬೆಳೆಸಿಕೊಳ್ಳುವುದು, ಉಗುರು ಬೆಳೆಸಿಕೊಳ್ಳುವುದು, ಅದಕ್ಕೆ ಬಣ್ಣ ಹಚ್ಚಿಕೊಳ್ಳುವುದು, ಹುಡುಗಿಯರಂತೆ ಮಾತನಾಡುವುದು, ನಡೆಯುವುದು, ಹುಡುಗಿಯರ ಉಡುಪನ್ನು ಧರಿಸುವುದು ಮುಂತಾದ ವರ್ತನೆಗಳು ಇವರಲ್ಲಿ ಸಾಮಾನ್ಯವಾಗಿದೆ. ಇನ್ನು ಹೆಣ್ಣಾಗಿ ಹುಟ್ಟಿ ಗಂಡಿನ ವರ್ತನೆ ಇರುವವರಲ್ಲಿ ಕ್ರೀಡೆಗಳಲ್ಲಿ ಹೆಚ್ಚಿನ ಆಸಕ್ತಿ, ಹೆಚ್ಚು ಬರ್ಹಿಮುಖಿಯಾಗಿರುವುದು, ಗಂಡುಡುಗೆ ಧರಿಸುವುದು, ಸಹಾಸಮಯ ಕೆಲಸಕ್ಕೆ ಮುಂದಾಗುವುದು, ಒರಟುತನವಿರುವುದು ಮುಂತಾದ ವರ್ತನೆಗಳು ಸಾಮಾನ್ಯವಾಗಿದೆ. ಬಹುಪಾಲು ಎಲ್ಲಾ ಮಂಗಳಮುಖಿಯರ ಬಾಲ್ಯವೂ ಸಹ, ಇಂತಹದೇ ವರ್ತನೆಯಿಂದ ಕೂಡಿದೆ ಎಂದು ಹೇಳಬಹುದು.

**ಶೈಕ್ಷಣಿಕ ಅಂತಸ್ತು**

ಹಲವರು ತಮಗಾಗುತ್ತಿದ್ದ ಅವಮಾನದಿಂದ ಅನಿವಾರ್ಯವಾಗಿ ಶಿಕ್ಷಣದ ಮೇಲಿನ ಆಸಕ್ತಿಯನ್ನು ಕಳೆದುಕೊಂಡಿದ್ದಾರೆ. ಆದರೆ ಕೆಲವರು ಮಾತ್ರ ಎಂತದೇ ಸಮಸ್ಯೆ ಬಂದರೂ ಸಹ ಅದನ್ನೆಲ್ಲಾ ಎದುರಿಸಿ ಉನ್ನತ ಶಿಕ್ಷಣವನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಶಿಕ್ಷಣದಲ್ಲಿ ಹಿಂದುಳಿದ ಮಂಗಳಮುಖಿಯರು ಸಾಮಾನ್ಯವಾಗಿ ಹಿರಿಯ ಪ್ರಾಥಮಿಕ ಶಾಲೆಗೆ ಹೋಗುವಲ್ಲಿಯೇ ವಿಫಲರಾಗಿದ್ದಾರೆ. ಇದಕ್ಕೆ ಕಾರಣ ತಮ್ಮಲ್ಲಿ ವ್ಯತ್ಯಾಸವಾಗಿರುವ ಹಾರ್ಮೋನು ಉದ್ರಿಕ್ತವಾಗಿ ಕೆಲಸ ಮಾಡುವ ಸಮಯವೆಂದರೆ ಅದು ಹದಿಹರೆಯದ ಆರಂಭದಲ್ಲಿ. ಈ ಹಂತದಲ್ಲಿ ಜೈವಿಕಲಿಂಗ ಮತ್ತು ಸಾಮಾಜಿಕ ಲಿಂಗದ ವರ್ತನೆಯ ನಡುವೆ ತಿಕ್ಕಾಟವುಂಟಾಗಿ ಗೊಂದಲಮಯ ಮನಸ್ಥಿತಿಯುಂಟಾಗುತ್ತದೆ. ಈ ಸಂದರ್ಭದಲ್ಲಿ ಅವರಿಗೆ ಎಲ್ಲವೂ ಅಸ್ಪಷ್ಟವಾಗಿರುತ್ತದೆ. ಹಾಗಾಗಿ ಶಿಕ್ಷಣದಲ್ಲೂ ಸಹ ಹಿಂದುಳಿಯುತ್ತಾರೆ ಎಂದು ಹೇಳಬಹುದು. ಆದರೂ ಸಹ ಕೆಲವೆ ಕೆಲವು ಮಂದಿ ಮಾತ್ರ ತಮ್ಮ ಗುರಿಯನ್ನು ಸ್ಪಷ್ಟವಾಗಿಸಿಕೊಂಡು ಶೈಕ್ಷಣಿಕ ಕ್ಷೇತ್ರದಲ್ಲಿ ಮುಂದುವರೆಯುತ್ತಾರೆ.

**ಆರ್ಥಿಕ ಭದ್ರತೆ**

ತಮ್ಮ ಜೀವನದಲ್ಲಿ ಬದಲಾದ ಸ್ಥಿತಿಯಿದ್ದರೂ ಸಹ ಹೇಗೋ ಕಷ್ಟಪಟ್ಟು ಉನ್ನತ ಶಿಕ್ಷಣ ಪಡೆದಿರುವವರೂ ಇದ್ದಾರೆ. ಆದರೆ ಅವರಿಗೆ ನಮ್ಮ ಸಮಾಜವಾಗಲೀ ಸರ್ಕಾರವಾಗಲಿ ಯಾವುದೇ ರೀತಿಯ ಉದ್ಯೋಗ ಭದ್ರತೆಯನ್ನು ನೀಡಿರುವುದಿಲ್ಲ. ಇಂದಿಗೂ ನಾವು ಗಮನಿಸಬಹುದಾದ ವಿಷಯ ಏನೆಂದರೆ ಯಾವುದೇ ವಲಯವನ್ನು ತೆಗೆದುಕೊಂಡರೂ ಸಹ ಅಲ್ಲಿ ಒಬ್ಬರೆ ಒಬ್ಬ ಮಂಗಳಮುಖಿ ಕೆಲಸಗಾರರನ್ನು ಕಾಣಲಾಗುವುದಿಲ್ಲ. ಸಂಪೂರ್ಣವಾಗಿ ಇಲ್ಲವೆಂದು ಹೇಳುತ್ತಿಲ್ಲ ಮಂಗಳಮುಖಿಯರು ಉದ್ಯೋಗ ಪಡೆದುಕೊಂಡಿರುವವರ ಸಂಖ್ಯೆ ಶೇಕಡ 1 ರಷ್ಟು ಇಲ್ಲ. ಸರ್ಕಾರಿ ಅಥವಾ ಖಾಸಾಗಿ ವಲಯದಲ್ಲಿ ಉದ್ಯೋಗ ಬೇಡ, ಸ್ವಾವಲಂಬಿಯಾಗಿ ಬದುಕೋಣವೆಂದರೂ ಸಹ ಬಿಡುವುದಿಲ್ಲ. ಲಿವಿಂಗ್ ಸ್ಮೈಲ್ ವಿದ್ಯಾರವರು ಲಿಂಗ ಪರಿವರ್ತನೆ ಮಾಡಿಸಿಕೊಂಡ ನಂತರ ಭಿಕ್ಷಾಟನೆ ಮಾಡುವುದು ಇಷ್ಟವಿಲ್ಲದೆ ರೈಲಿನಲ್ಲಿ ಸಣ್ಣ ಪುಟ್ಟ ವ್ಯಾಪಾರವನ್ನು ಆರಂಭಿಸುತ್ತಾರೆ. ಭಿಕ್ಷೆ ಕೇಳಲು ಬಂದಾಗ 'ಕೈಕಾಲು

ಚೆನ್ನಾಗಿದೆ ದುಡಿದು ತಿನ್ನಬಹುದಲ್ಲವೇ' ಎಂದು ಹೇಳುವ ಜನರು ಅವರೇ "ಒಂದು ವ್ಯಾಪರದಲ್ಲಿ ತೊಡಗಿದಾಗ ಅವರ ಹತ್ತಿರ ಕೊಳ್ಳಲು ತಯಾರಿಲ್ಲ. ಕೊಳ್ಳುವುದಿರಲಿ ಅವರ ಹತ್ತಿರ ಸುಳಿಯುವುದಕ್ಕೂ ತಯಾರಿಲ್ಲ" ಎಂದು ತಮ್ಮ ಆತ್ಮಕತೆಯಲ್ಲಿ ಬರೆದುಕೊಂಡಿದ್ದಾರೆ. ಮಂಗಳಮುಖಿಯರೂ ಮನುಷ್ಯರೇ ಎಂದು ಒಪ್ಪಿಕೊಳ್ಳಲು ಹಿಂದುಮುಂದು ನೋಡುವ ಸಮಾಜದಲ್ಲಿ ಅವರು ಒಂದು ಉದ್ಯೋಗವನ್ನು ಹೇಗೆ ತಾನೇ ಗಳಿಸಿಯಾರು.

ಇವರ್‍ಯಾರಿಗೂ ಉದ್ಯೋಗ ಇಲ್ಲ ಎಂದ ಮಾತ್ರಕ್ಕೆ ಅವರೆಲ್ಲರೂ ಹಸಿದು ಸಾಯುತ್ತಾರೆಂದು ತಿಳಿಯಬೇಕಿಲ್ಲ. ಮೈ ಮಾರುವುದನ್ನೆ ಕಾಯಕ ಮಾಡಿಕೊಂಡು ಲೈಂಗಿಕ ವೃತ್ತಿಯಲ್ಲಿ ತೊಡಗಿದ್ದಾರೆ. ಇದರಿಂದ ಅವರಿಗೆ ಬರುವ ಆದಾಯ ಕೇವಲ 500 ರೂಪಾಯಿ. ಇದಕ್ಕೆ ಅವರು ಕನಿಷ್ಠ ಐದು ಜನರ ಬಳಿಯಾದರು ಸೆರಗು ಹಾಸಬೇಕು ಎಂದು ಲೀನಾ ಹೇಳುತ್ತಾರೆ. ಅವರೇ ಹೇಳುವಂತೆ ಮಳೆಗಾಲದಲ್ಲಿ ಗಿರಾಕಿಗಳ ಕೊರತೆಯು ಕಾಡುತ್ತದೆ. ಅಂತಹ ಸಂದರ್ಭದಲ್ಲಿ ಬಿಕ್ಷಾಟನೆಯಲ್ಲಿ ತೊಡಗುತ್ತಾರೆ. ಇದನ್ನು ಮಂಗಳಮುಖಿ ಸಂಪ್ರಾದಾಯದಲ್ಲಿ ಅಂಗಡಿ ಕೇಳುವುದು ಎನ್ನುತ್ತಾರೆ. ಭಿಕ್ಷಾಟನೆಯ ಸಂದರ್ಭದಲ್ಲಿ ಸಾರ್ವಜನಿಕರು ಮತ್ತು ಪೊಲೀಸರಿಂದ ಕಿರುಕುಳವೇ ಹೆಚ್ಚಾಗಿದೆ. "ನಮಗೆ ಯಾರೂ ಉದ್ಯೋಗ ಕೊಡುವುದು ಬೇಡ ಆದರೆ, ನಾನು ಮಾಡುವ ಲೈಂಗಿಕ ವೃತ್ತಿ ಮತ್ತು ಭಿಕ್ಷಾಟನೆಯನ್ನು ನೆಮ್ಮದಿಯಿಂದ ಮಾಡಲು ಬಿಟ್ಟರೆ ಸಾಕು. ನಮ್ಮ ಜೀವನಕ್ಕಾಗಿ ನಾವು ಆರಿಸಿಕೊಂಡಿರುವ ವೃತ್ತಿಯನ್ನು ಮಾಡಲು ಭಾರತೀಯ ಕಾನೂನು ವ್ಯವಸ್ಥೆಯಲ್ಲಿ ವೇಶ್ಯಾವೃತ್ತಿ ತಡೆ ಕಾಯ್ದೆ, ಭಿಕ್ಷಾಟನೆ ತಡೆ ಕಾಯ್ದೆಯನ್ನು ತಂದು ನಮ್ಮನ್ನು ಸಾಮಾಜಿಕವಾಗಿ ಹೊರಗುಳಿಯುವಂತೆ ಮಾಡಿದ್ದಾರೆ. ಯಾರೂ ಕೆಲಸವನ್ನು ಕೊಡುವುದಿಲ್ಲ ನಾವು ಮಾಡುವ ಕೆಲಸಕ್ಕೂ ಅಡ್ಡಿಯುಂಟು ಮಾಡುತ್ತಾರೆ. ಹೊಟ್ಟೆಗೆ ನಾವೇನು ಮಣ್ಣು ತಿನ್ನಬೇಕಾ" ಎಂದು ಪ್ರೀತಿ ಅವರು ತಮ್ಮ ವಿಷಾದವನ್ನು ವ್ಯಕ್ತಪಡಿಸಿದ್ದಾರೆ.

ಇನ್ನು ಇವರು ಮಂಗಳಮುಖಿಯರಾದ ಕಾರಣ ನಮ್ಮ ಮನೆಯಿಂದಲೂ ಆಸ್ತಿಯಲ್ಲಿ ಪಾಲು ದೊರೆಯುವುದಿಲ್ಲ. ಸ್ವಯಂ ಉದ್ಯೋಗ ಮಾಡಲಿಕ್ಕೆ ಬ್ಯಾಂಕಿನವರು ಸಾಲ ಕೊಡುವುದಿಲ್ಲ, ನೆರೆ ಹೊರೆಯವರು ಸಹಾಯ ಮಾಡುವುದಿಲ್ಲ. ಹಾಗಾಗಿ ಮಂಗಳಮುಖಿಯರ ಆರ್ಥಿಕ ಭದ್ರತೆಯು ತುಂಬಾ ಹೀನಾಯವಾಗಿದೆ. ಆದರೂ ಅಲ್ಲೊಂದು ಇಲ್ಲೊಂದು ಸಕರಾತ್ಮಾಕ ಪ್ರಕರಣಗಳು ಆರ್ಥಿಕ ಸಮಸ್ಯೆಯನ್ನು ಹೊಂದಿಲ್ಲ ಎಂದು ಹೇಳಬಹುದಾಗಿದೆ

**ಸಾಮಾಜಿಕ ಅಂತಸ್ತು ಮತ್ತು ಸಮಸ್ಯೆಗಳು**

ನಮ್ಮ ಭಾರತೀಯ ಸಮಾಜದಲ್ಲಿ ಲಿಂಗದ ಆಧಾರದ ಮೇಲೆ ಅನಾದಿ ಕಾಲದಿಂದಲೂ ಹಲವಾರು ಶೋಷಣೆ, ಹಿಂಸೆ, ತಾರತಮ್ಯಗಳನ್ನು ಈ ಪುರುಷ ಪ್ರಧಾನ ವ್ಯವಸ್ಥೆಯು ಮಾಡುತ್ತಲೇ ಬಂದಿದೆ. ಅದು ಇಂದಿಗೂ ಮುಂದುವರೆದಿದೆ. ಆದರೆ ಮಂಗಳಮುಖಿಯರ ಮೇಲೆ ಕೇವಲ ಪುರುಷ ಪ್ರಧಾನತೆ ಮಾತ್ರವಲ್ಲದೆ ಸರ್ಕಾರ, ಮಹಿಳೆಯರು, ಮಕ್ಕಳು, ಸಮಾಜದ ಯಾರೂ ಹೊರತಾಗದಂತೆ ಎಲ್ಲರೂ ಶೋಷಣೆಯನ್ನು ಮಾಡುತ್ತಲೇ ಬಂದಿದ್ದಾರೆ. ಇವರ ಮೇಲೆ ಆಗುತ್ತಿರುವ ಶೋಷಣೆ ಮತ್ತು ತಾರತಮ್ಯಗಳು ಜಾತಿ ವ್ಯವಸ್ಥೆಯಲ್ಲಾಗುವುದಕ್ಕಿಂತ ಸಾವಿರಪಟ್ಟು ಹೆಚ್ಚಾದುದು ಎಂದರೂ ಅತಿಶಯೋಕ್ತಿಯಲ್ಲ. ಜಾತಿಯ ಕಾರಣಕ್ಕಲ್ಲದೆ ತಮ್ಮ ಸಹಜ ವರ್ತನೆಯ ಕಾರಣಕ್ಕೆ ಒಂದು ರೀತಿಯ ಅಸ್ಪೃಶತೆಯನ್ನು ಇಂದಿಗೂ ಈ ಸಮುದಾಯದವರು ಅನುಭವಿಸುತ್ತಿದ್ದಾರೆ. ಪ್ರಸ್ತುತ ಸಮಾಜದಲ್ಲಿ ಇವರಿಗೆ ಯಾವುದೇ ಘನತೆ ಗೌರವಗಳಿಲ್ಲ, ಎಲ್ಲರೂ ಹಿಯಾಳಿಸುವವರೆ ಆಗಿದ್ದಾರೆ ಎಂದು ಹೇಳಬಹುದು. ರಕ್ತ ಸಂಬಂಧಿಗಳ ನಡುವೆಯೆ ಕೊಲೆ, ಸುಲಿಗೆ, ಅಸೂಯೆ, ಅಗೌರವ ಇರುವ ಈ ಜಗತ್ತಿನಲ್ಲಿ ಮಂಗಳಮುಖಿಯರ ಮೇಲೆ ಇವೆಲ್ಲಾ ನಡೆಯದೇ ಇರಲು ಸಾಧ್ಯವೇ ಇಲ್ಲ. ಭಾರತದ ಸಾಮಾಜಿಕ ಸ್ಥರ ವ್ಯವಸ್ಥೆಯೊಳಗೇ ಪ್ರವೇಶವಿಲ್ಲದ ಸ್ಥಿತಿಯು ಇಂದು ಮಂಗಳಮುಖಿಯರಿಗೆ ಎದುರಾಗಿದೆ. ಇನ್ನು ಸಮಸ್ಯೆಗಳ ಬಗ್ಗೆ ಹೇಳುವುದಾದರೆ ಇಡೀ ಜಗತ್ತಿನಲ್ಲಿರುವ ಸಮಸ್ಯೆಗಳೆಲ್ಲವೂ ಇವರಿಗೆ ಇದೆ ಎಂದು ಹೇಳಬಹುದು.

**ಪ್ರಸ್ತುತದ ಸ್ಥಿತಿಗತಿಗಳು**

ಇಷ್ಟೆಲ್ಲಾ ಸಮಸ್ಯೆಗಳು ಪ್ರಸ್ತುತದಲ್ಲಿ ಇವರಿಗೆ ಇದ್ದರೂ ಸಹ ಹಲವು ರೀತಿಯಾದ ಮಹತ್ತರವಾದ ಬದಲಾವಣೆಗಳು ನಡೆದಿವೆ. ಏಪ್ರಿಲ್ 15, 2014ರಲ್ಲಿ ಮಂಗಳಮುಖಿಯರನ್ನು ತೃತೀಯ ಲಿಂಗದವರೆಂದು ಗುರುತಿಸಲಾಗಿದೆ, ಇದರ ನಂತರ ಕರ್ನಾಟಕದಲ್ಲಿ ಒಬ್ಬ ಮಂಗಳಮುಖಿಗೆ ರಾಜ್ಯಪ್ರಶಸ್ತಿಯು ಬಂದಿದೆ. ರಾಜಕೀಯದಲ್ಲಿ ಪ್ರವೇಶ ಪಡೆದಿದ್ದಾರೆ. ಕೆಲವು ಉನ್ನತ ಹುದ್ದೆಗಳಿಗೂ ಕಾಲಿಟ್ಟಿದ್ದಾರೆ. ಈ ಸನ್ನಿವೇಷದಲ್ಲಿ ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳೂ ಸಹ ಬೇರೆ ಬೇರೆ ಆಯಾಮಗಳಲ್ಲಿ ಚರ್ಚೆಯಾಗುತ್ತಿದೆ. ಪಡಿತರ ಚೀಟಿ, ಮತದಾರ ಚೀಟಿ, ಪಿಂಚಣಿ ಎಲ್ಲವನ್ನೂ ನೀಡಲಾಗಿದೆ. ಇವೆಲ್ಲವೂ ಕೇವಲ ಕಣ್ಣಿಗೆ ಕಾಣುವ ಬದಲಾವಣೆಗಳು. ಆದರೆ ಕಾಣದಿರುವ ಗುಣಾತ್ಮಾಕ ಬದಲಾವಣೆಯಾಗಬೇಕಿದೆ.

**ಉಪಸಂಹಾರ**

ಜಗತ್ತಿನ ಜೀವರಾಶಿಗಳೆಲ್ಲದರಲ್ಲೂ ಇದ್ದರೂ ಮನುಷ್ಯ ಪ್ರಾಣಿಯಲ್ಲಿ ಮಾತ್ರ ಗುರುತಿಸಲ್ಪಡುತ್ತಿರುವ ಹೆಣ್ಣು ಮತ್ತು ಗಂಡೆಂದು ಗುರುತಿಸಿಕೊಳ್ಳಾಲಾರದ ರೂಪ ಎಷ್ಟೊಂದು ಸಮಸ್ಯೆಗಳನ್ನು ಸೃಷ್ಟಿಸಿದೆ. ಎಷ್ಟೋ ಅವಮಾನದ ಪ್ರಸಂಗಗಳು. ನಮ್ಮೊಳಗಿನ ಈ ಅಮಾನವೀಯ ನಡವಳಿಕೆ ಸರಿಯೇ? ಎಲ್ಲರಂತೆ ನಾನೂ ಮಂಗಳಮುಖಿಯರನ್ನು ಕಂಡು ಕುಹಕ ಮಾಡುತ್ತಿದ್ದುದು ನಿಜ. ಆದರೆ ಕೆಲವು ಮಂಗಳಮುಖಿಯರ ಪರಿಚಯವಾದ ಮೇಲೆ ನನ್ನ ಮೇಲೆ ನನಗೇ ಅಸಹ್ಯ ಹುಟ್ಟುವಂತಾಯಿತು. ಅಂದೇ ನಿರ್ಧಾರ ಮಾಡಿದೆ. ಎಂಥದೋ ಸಣ್ಣ ಪುಟ್ಟ ಸಮಸ್ಯೆಗಳಿಗೆ ಕಾರಣವಿಲ್ಲದೆ ದಿನಗಟ್ಟಲೇ ಹೋರಾಟ ಮಾಡುವ ಜನರ ನಡುವೆ ಮಂಗಳಮುಖಿಯರ ಹಕ್ಕುಗಳಿಗಾಗಿ ಅವರ ಏಳಿಗೆಗಾಗಿ ಯಾರು ಗಮನ ಹರಿಸುತ್ತಿಲ್ಲ. ಹಾಗಾಗಿ ಇವರ ಕುರಿತಾದದ ಒಂದು ಅಧ್ಯಯನ ಮಾಡಬೇಕು ಎನಿಸಿತು. ಮಾಡಿದೆ.

ಬೆಂಗಳೂರೆಂಬ ಮಾಯನಗರಿಯ ರಸ್ತೆಗಳಲ್ಲಿ ಅಂಗಡಿಯ ಮುಂದೆ ಚಪ್ಪಾಳೆ ತಟ್ಟಿ ಮಾಮಾ ಎಂದು ಕರೆದು ನಿಲ್ಲುವ ಆ ಜೀವಗಳನ್ನು ಕಂಡಾಗ, ಸುತ್ತಮುತ್ತಲ ಮನುಷ್ಯರ ಪ್ರತಿಕ್ರಿಯೆಯನ್ನು ಗಮನಿಸುವಾಗ ಕ್ರೌರ್ಯತೆಯ ಕರಾಳ ಸ್ವರೂಪ ಗೋಚರಿಸಲಾರಂಭಿಸಿತು. ಪರಿಣಾಮ ಹಾಗೆ ಲೇವಡಿ ಮಾಡುವವರನ್ನು ಹಿಡಿದು ಥಳಿಸಬೇಕೆನಿಸಿತು. ಈ ಜಗತ್ತೆ ಒಂದು ಅಮಾನವೀಯ ನಡೆಗಳ ಸಂತೆ. ನರಕ ಸದೃಶವಾದ ಮಂಗಳಮುಖಿಯರ ಈಗಿರುವ ಬದುಕಿನಿಂದ ಹೊರಬಂದು ಎಲ್ಲರಂತೆ ಅವರೂ ಒಟ್ಟಿಗೆ ಬಾಳಿ ಬದುಕುವ ಕಾಲ ಬರಬಹುದೇ? ಎಲ್ಲೋ ಕೆಲವರಿಗೆ ಸರ್ಕಾರಿ ನೌಕರಿ ದೊರಕಿದರೆ ಈ ಸಮಸ್ಯೆ ಪರಿಹಾರವಾಗುವುದೆ? ಇಂತಾ ಅನೇಕ ಪ್ರಶ್ನೆಗಳು ನಮ್ಮಲ್ಲಿ ರೂಪುಗೊಳ್ಳುತ್ತವೆ, ಆದರು ಎಲ್ಲವೂ ಸರಿಯಿದೆ ಎಂದು ಹೇಳಲಾಗದು ಇಲ್ಲಿ ನಾವೇಲ್ಲಾ ಗಮನಿಸಬೇಕಾದ ಒಂದು ಅಂಶವಿದೆ. ಮಂಗಳಮುಖಿಯರ ವೇಷ ಧರಿಸುವ ಕಾಮುಕ

ಗಂಡಸರು ಅವರ ಹೆಸರಿಗೆ ಇನ್ನೂ ಒಂದು ರೀತಿ ಕಳಂಕ ತರುತ್ತಿದ್ದಾರೆ. ಅದೇಷ್ಟೋ ಅಮಾಯಕ ಹೆಣ್ಣು ಮಕ್ಕಳಿಗೆ ಪೀಡಕರಾಗಿದ್ದಾರೆ. ಇದು ಅವರ ಹೆಸರಿನಲ್ಲಿ ನಡೆಯುತ್ತಿರುವ ಕ್ರೌರ್ಯ ಎಂದರೂ ಅತೀಶಯೋಕ್ತಿ ಯಿಲ್ಲ. ಪ್ರತಿ ಸಮುದಾಯದಲ್ಲೂ ಕೆಟ್ಟವರಿರುವಂತೆ ಮಂಗಳಮುಖಿಯರ ಸಮುದಾಯದಲ್ಲೂ ಕೆಲವರಿದ್ದಾರೆ. ಉದ್ದೇಶ ಪೂರ್ವಕವಾಗಿ ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರಿಗೆ ಅಸಹ್ಯ ಹುಟ್ಟುವಂತೆ ನಡೆದುಕೊಳ್ಳುವುದು, ಬಲವಂತವಾಗಿ ಹಣ ವಸೂಲಿ ಮಾಡುವುದು, ರೈಲಿನಲ್ಲಿ ಯುವಕರ ಹತ್ತಿರ ಅಸಭ್ಯ ವರ್ತನೆ ತೋರುವುದು ಮುಂತಾದ ಅಹಿತಕರ ವರ್ತನೆ ಸಹ ಅವರಲ್ಲಿವೆ. ಆದರೆ ಇವುಗಳಿಗೆಲ್ಲಾ ಕಾರಣಗಳ ಮೂಲ ಹುಡುಕ ಬೇಕಾಗುತ್ತದೆ. ಮೊದಲನೇಯದಾಗಿ ಕೆಟ್ಟ ಗುಣಗಳು ಯಾರೊಬ್ಬರ ಆಸ್ತಿಯು ಅಲ್ಲ. ಅದು ಎಲ್ಲರಲ್ಲಿಯೂ ಸಾಮಾನ್ಯವಾಗಿ ಕಾಣುವಂತದ್ದು. ಎರಡನೇಯದು ಮಂಗಳಮುಖಿಯರಿಗೆ ಸೂಕ್ತ ಶಿಕ್ಷಣ ಇಲ್ಲದಿರುವುದೇ ಇಂತಹ ವರ್ತನೆಗಳಿಗೆ ಪ್ರಮುಖ ಕಾರಣವೆನ್ನಬಹುದು. ಯಾಕೆಂದರೆ ಪೋಷಕರು ಸರಿಯಾಗಿದ್ದು, ಸಮಾಜದಲ್ಲಿ ಒಂದು ಘನತೆಯನ್ನಿಟ್ಟುಕೊಂಡವರೆ ಅನೇಕ ರೀತಿಯ ಸಮಾಜ ಬಾಹಿರ ಕೃತ್ಯಗಳಲ್ಲಿ ತೊಡಗಿರುತ್ತಾರೆ. ಇವರಿಗೆಲ್ಲಾ ಸಾಮಾಜಿಕರಣವು ಸರಿಯಾಗೇ ಆಗಿರುತ್ತದೆ. ಇಂತವರೇ ತಪ್ಪು ಮಾಡುವಾಗ ಇನ್ನೂ ಸಾಮಾಜೀಕರಣವಾಗುವ ವೇಳೆಗೆ ಅನೇಕ ರೀತಿಯ ಮಾನಸಿಕ ತುಮುಲಗಳಿಗೆ ಒಳಗಾಗಿ ಹದಿಹರೆಯದಲ್ಲಿ ಮನೆ ಬಿಟ್ಟು, ಕೌಟುಂಬಿಕ ಸಾಮಾಜೀಕರಣದಿಂದ ವಂಚಿತರಾಗಿ ದುಸ್ತರದಿಂದ ಕೂಡಿರುವ ಮಂಗಳಮುಖಿಯರ ಸಮುದಾಯಕ್ಕೆ ಬಂದು ಸೇರುವ ಇವರಿಂದ ನಾವು ಬರೀ ಒಳ್ಳೆಯ ತನವನ್ನೇ ನಿರೀಕ್ಷಿಸುವುದು ಎಷ್ಟು ಸರಿ ? ಹಾಗಾಗಿ ಇವರಲ್ಲೂ ಸಹ ಕೆಟ್ಟ ವರ್ತನೆಯುಳ್ಳವರು, ಕಳ್ಳರು, ಕೊಲೆಗಡುಕರು, ಇರಬಹುದಾದ ಸಾಧ್ಯತೆಗಳಿವೆ. ಆದರೂ ಹಲವರು ಸದ್ಗುಣ ಹೊಂದಿರುವವರೇ ಇದ್ದಾರೆ. ಸಮಾಜದ ಪ್ರಚೋದನೆಗೆ ತಕ್ಕಂತೆ ಅವರ ಪ್ರತಿಕ್ರಿಯೆ ಇರುತ್ತದೆ. ಸಮಾಜ ಅವರನ್ನು ನಡೆಸಿಕೊಳ್ಳುವ ಆಧಾರದ ಮೇಲೆ ಅವರ ವರ್ತನೆ ನಿರ್ಧಾರವಾಗಿರುತ್ತದೆ. ಅವರು ಮಾಡುವ ಕೆಲವೇ ಕೆಲವು ತಪ್ಪುಗಳನ್ನು ಮಾತ್ರ ಬೆರಳು ಮಾಡಿ ತೋರಿಸುವ ನಾವು ನಮ್ಮ ವರ್ತನೆಗಳನ್ನೇಕೆ ಒಮ್ಮೆ ವಿಮರ್ಶಿಸಿಕೊಳ್ಳಬಾರದು. ಈ ಹಂತದಲ್ಲಿ ಬದಲಾವಣೆಯಾಗಬೇಕಾಗಿದೆ.

ಇಂದು ಜನರು ಮತ್ತು ಸರ್ಕಾರವು ಮೂಕಪ್ರಾಣಿಗಳ ಮೇಲೆ ತೋರುತ್ತಿರುವ ದಯೆಯನ್ನೂ ಸಹ ಈ ಸಮುದಾಯದವರ ಮೇಲೆ ತೋರುತ್ತಿಲ್ಲ. ನಾನು ಅಧ್ಯಯನ ಮಾಡಿದವರಲ್ಲಿ ಮೂರು ಜನ ಇಂಜಿನಿಯರ್‌ಗಳಿದ್ದರು. ಆದರೆ ಅವರಿಂದು ಮಾಡುತ್ತಿರುವ ಉದ್ಯೋಗ ಲೈಂಗಿಕ ವೃತ್ತಿ. ಕಾರಣ ಅವರಿಗೆ ಕೆಲಸ ಕೊಡಲು ಯಾರೂ ಸಿದ್ಧರಿಲ್ಲ. ಖಾಸಗಿ ಸ್ಥಳಗಳಲ್ಲೂ ಇದೇ ಕಥೆ. ಸ್ವಯಂ ಉದ್ಯೋಗ ಮಾಡುವುದಕ್ಕೆ ಯಾರೂ ಸಾಲ ನೀಡುವುದಿಲ್ಲ, ಇವರತ್ತ ಸರ್ಕಾರವೂ ಗಮನ ಹರಿಸುವುದಿಲ್ಲ. ಇಲ್ಲಿ ಸರ್ಕಾರವೂ ಮಂಗಳಮುಖಿಯರನ್ನು ಹೊರಗುಳಿಸಿರುವುದಲ್ಲದೆ ತನಗೆ ತಾನೇ ವಂಚಿಸಿಕೊಳ್ಳುತ್ತಿದೆ. ಹೇಗೆಂದರೆ ಪ್ರತಿಯೊಬ್ಬ ವಿಧ್ಯಾರ್ಥಿಯು ಇಂಜಿನಿಯರಿಂಗ್ ಮುಗಿಸಿ ಹೊರ ಬರಬೇಕಾದರೆ ಸರ್ಕಾರ ವ್ಯಯಿಸುವ ಹಣ ಲಕ್ಷಗಟ್ಟಲೆ ಇರುತ್ತದೆ, ಆತ ಪದವಿಯನ್ನು ಪಡೆದ ನಂತರ ಅವನ ಶಿಕ್ಷಣದಿಂದ ಉಪಯೋಗವಿಲ್ಲ ಎಂದ ಮೇಲೆ ಸರ್ಕಾರದ ಖರ್ಚು ಹೊಳೆಯಲ್ಲಿ ಹುಣಸೆಹಣ್ಣು ತೊಳೆದಂತಾಗುತ್ತದೆ. ಇಲ್ಲಿ ಕೇವಲ ಇಂಜಿನಿಯರಿಂಗ್ ಮಾಡಿರುವ ಮೂವರನ್ನು ಮಾತ್ರ ಹೆಸರಿಸಿದ್ದೇನೆ, ಆದರೆ ಇವರಂತೆ ಎಂ,ಕಾಂ ಕಂಪ್ಯೂಟರ್ ಸೈನ್ಸ್, ಮೆಡಿಕಲ್, ಎಂಬಿಎ ಓದಿರುವ ಅನೇಕರು ಲೈಂಗಿಕ ಕಾರ್ಯದಲ್ಲಿ ತೊಡಗಿದ್ದಾರೆ, ಇದನ್ನು ನೋಡಿದರೆ ಮಂಗಳಮುಖಿಯರೇ ಸ್ವಯಂ ನಿರ್ಧಾರ ತೆಗೆದುಕೊಂಡರು, ಅವರೇ ಬೇರೆ ಕೆಲಸಕ್ಕೆ ಹೋಗಬಹುದಿತ್ತು ಎನಿಸುತ್ತದೆ. ಆದರೆ ಇದು ಅವರದೇ ನಿರ್ಧಾರವಾಗಿದ್ದರು ಸಹ ಇಡೀ ಸಮಾಜದ ಪ್ರಬಲವಾದ ಪ್ರಭೆಯಿಂದಾಗಿ ಅವರು ಇಂತಹ ನಿರ್ಧಾರ ತೆಗೆದುಕೊಳ್ಳುವಂತೆ ಮಾಡಲಾಗಿದೆ. ಇದಕ್ಕೆ ಎಲ್ಲರೂ ಪಾಲುದಾರರಾಗಿದ್ದಾರೆ. ಈ ಸಮಸ್ಯೆಗೆ ಮೊದಲು ಪರಿಹಾರ ಬೇಕಾಗಿದೆ. ಎಲ್ಲರಿಂದಲೂ ಅಸ್ಪೃಶ್ಯತೆ ಅನುಭವಿಸುತ್ತಿರುವ ಸಮೂಹ ಹೊಟ್ಟೆ ಪಾಡಿಗಾಗಿ ಇನ್ನೇನು ತಾನೆ ಮಾಡಲು ಸಾಧ್ಯ. ಅವರಿಗೆ ಉಳಿದಿರುವುದು ಎರಡೇ ದಾರಿ. ಒಂದು ಭಿಕ್ಷಾಟನೆ, ಮತ್ತೊಂದು ಲೈಂಗಿಕ ವೃತ್ತಿ.

ಇನ್ನು ಸ್ವಂತ ಕುಟುಂಬದಿಂದಲೇ ಅವಹೇಳನಕ್ಕೆ ಗುರಿಯಾಗುವ ಸ್ಥಿತಿ ಮಂಗಳಮುಖಿಯರದು. ಶಾಲೆಯಲ್ಲಿ ಪಾಠ ಮಾಡುವ ಶಿಕ್ಷಕರೇ ಇವರ ವರ್ತನೆಯನ್ನು ಕಂಡು ವ್ಯಂಗ್ಯವಾಡುವಾಗ ಯಾರಿಗೆ ಏನು ಹೇಳಿದರೇ ಏನು ಪ್ರಯೋಜನ. ಅನಾದಿ ಕಾಲದಿಂದಲೂ ಶೋಷಣೆ ತಾರತಮ್ಯ ಅನುಭವಿಸುತ್ತಿರುವ ಮಹಿಳೆಯರೇ ಮನೆಯಿಂದ ಹೊರಬೇಕಾದರೆ ಇಷ್ಟು ಶತಮಾನಗಳು ಕಳೆಯಬೇಕಾಯಿತು. ಇನ್ನೂ 2014ರಲ್ಲಿ ತೃತೀಯ ಲಿಂಗದವರೆಂದೂ ಮಾನ್ಯತೆ ಪಡೆದಿರುವ ಲೈಂಗಿಕ ಅಲ್ಪಸಂಖ್ಯಾತರು ಅಭಿವೃದ್ದಿಯಡೆಗೆ ಸಾಗಬೇಕಾದರೆ ಇನ್ನೂ ಹಲವು ಶತಮಾನಗಳು ಬೇಕಾಗಬಹುದೇನೋ? ಇಲ್ಲಾ, ಇದು ಜಾಗತಿಕ ಯುಗ, ಬದಲಾವಣೆಗೆ ಬಹುಬೇಗ ಹೊಂದಿಕೊಳ್ಳುವ ಪರಿಸರವಿರುವ ಯುಗ. ಇವರನ್ನು ಒಪ್ಪಿಕೊಳ್ಳುವ ಮನಸ್ಥಿತಿ ಈ ತಲೆಮಾರಿನ ಜನರಲ್ಲಿ ಕಾಣುತ್ತಿದೆ. ಈ ಹಿಂದೆಯೇ ಚರ್ಚಿಸಿದಂತೆ ಮಂಗಳಮುಖಿಯರಲ್ಲಿ ಸಾಧನೆ ಮಾಡುತ್ತಿರುವವರು, ಇವರ ಬಗೆಗಿನ ಸರ್ಕಾರದ ನಿಲುವುಗಳು, ಇವೆಲ್ಲವೂ ಸಕಾರಾತ್ಮಕವಾಗಿವೆ. ಹಾಗಾಗಿ ಬದಲಾವಣೆ ಬಹುಬೇಗನೆ ಸಾಧ್ಯ..

ಸರ್ಕಾರದಿಂದ ಆಗಬೇಕಾದ ಕೆಲಸಗಳು ಆಗುತ್ತಿವೆ. ಆದರೆ ಜನರ ಮನಸಿನಲ್ಲಿ ಇವರ ಬಗ್ಗೆ ಇರುವ ಕಳಂಕವನ್ನು ತೊಳೆಯುವುದು ಪ್ರಮುಖವಾದ ಕೆಲಸ. ಎಲ್ಲಾ ಮನುಷ್ಯರಂತೆಯೇ ಇವರೂ ಎಂದು ತಿಳಿದು ಅವರನ್ನ ಸಾಮಾಜಿಕವಾಗಿ ಒಪ್ಪಿಕೊಳ್ಳುವ ಕೆಲಸವಾಗಬೇಕಾಗಿದೆ.

**ಫಲಿತಾಂಶಗಳು**

- ಬಹುತೇಕ ಮಂಗಳಮುಖಿಯರು ತಮ್ಮ ಕುಟುಂಬದೊಂದಿಗೆ ವಾಸಿಸುತ್ತಿಲ್ಲ.
- ಬಹುಪಾಲು ಮಂಗಳಮುಖಿಯರು ತಮ್ಮ ಶಿಕ್ಷಣವನ್ನು ಪ್ರಾಥಮಿಕ ಹಂತಕ್ಕೆ ಮೊಟಕುಗೊಳಿಸಿಕೊಂಡಿದ್ದಾರೆ.
- ಮಂಗಳಮುಖಿಯರ ಆರ್ಥಿಕ ಭದ್ರತೆಯ ಅಂಶವು ದುಸ್ತರವಾಗಿದೆ.
- ಅನೇಕ ಮಂಗಳಮುಖಿಯರು ಭಿಕ್ಷಾಟನೆ ಮತ್ತು ಲೈಂಗಿಕ ವೃತ್ತಿಯನ್ನೆ ಅವಲಂಬಿಸಿದ್ದಾರೆ.
- ಪಡಿತರ ಚೀಟಿ, ಮತದಾರ ಗುರುತಿನ ಚೀಟಿಯು ಅರ್ಹತೆಯಿರುವ ಎಲ್ಲಾ ಮಂಗಳಮುಖಿಯರಿಗೂ ಇದೆ.
- ಉನ್ನತ ಶಿಕ್ಷಣ ಪಡೆದಿರುವ ಮಂಗಳಮುಖಿಯರೂ ಸಹ ಲೈಂಗಿಕ ವೃತ್ತಿ ಮತ್ತು ಭಿಕ್ಷಾಟನೆಯನ್ನೆ ಆವಲಂಬಿಸಿದ್ದಾರೆ.
- ಇಂದಿಗೂ ಸಹ ಇವರು ದೌರ್ಜನ್ಯ, ತಾರತಮ್ಯ, ಅಸ್ಪೃಶ್ಯತೆ, ಅವಹೇಳನದಿಂದ ಮುಕ್ತವಾಗಿಲ್ಲ.
- ಆರೋಗ್ಯಕರ ಬೆಳವಣಿಗೆ ಎಂಬಂತೆ ಮದುವೆಯಾಗಿರುವ ಮಂಗಳಮುಖಿಯರೂ ಇದ್ದಾರೆ.

- ನೃತ್ಯ ಶಿಕ್ಷಕಿ, ರೇಡಿಯೋ ಜಾಕಿ, ಮುಂತಾದ ಉನ್ನತ ಹುದ್ದೆಗಳಲ್ಲಿರುವ ಮಂಗಳಮುಖಿಯರೂ ಇದ್ದಾರೆ.
- ಬಹುಪಾಲು ಮಂಗಳಮುಖಿಯರು ಸಾಧಿಸುವ ಹಂಬಲವಿರುವವರೇ ಆಗಿದ್ದಾರೆ.

**ಆಧಾರ ಗ್ರಂಥಗಳು**

1. ನಾನು ಅವನಲ್ಲ ಅವಳು (2009), ಲಿವಿಂಗ್ ಸ್ಮೈಲ್ ವಿದ್ಯಾ, ಪ್ರಗತಿ ಗ್ರಾಫಿಕ್ಸ್, ವಿಜಯನಗರ, ಬೆಂಗಳೂರು.
2. ಬದುಕು ಬಯಲು (2011), ಎ ರೇವತಿ, ಗೌರಿಲಂಕೇಶ್ ಪ್ರಕಾಶನ,
3. ಸಂಕುಲ (ಹಿಂದುಳಿದ ವರ್ಗಗಳ ಆಯೋಗದ ವರದಿ) (2012), ಡಾ. ಸಿ ಎಸ್ ದ್ವಾರಕಾನಾಥ್, ಅವಿರತ ಪ್ರಕಾಶನ, ಬೆಂಗಳೂರು.
4. ವರ್ಷವರ (2015), ಸಿ ಕೆ ಯೋಗಾನಂದ, ಕೋವಿ ಪ್ರಕಾಶನ, ಬೆಂಗಳೂರು.
5. ಅನನ್ಯ (ಲೈಂಗಿಕ ಅಲ್ಪಸಂಖ್ಯಾತರ ದನಿ), ತ್ರೈಮಾಸಿಕ, ಬೆಂಗಳೂರು.
6. Cochran (2002), Challenges Faced by Homeless Sexual Minorities: Comparison of Gay, Lesbian, Bisexual, and Transgender Homeless Adolescents With Their Heterosexual Counterparts, American Journal of Public Health. America
7. Discrimination of sexual minorities and plans to relocate-2013, Margaret h.smith.
8. FPA -2014, Dharvad branch.
9. Faiths against homophobia(2015), ncci commission of justice-peace and creation.
10. Lisa M. Diamond and Sarah Lucas (2004), Sexual-Minority and Heterosexual Youths' Peer Relationships : Experiences, Expectations, and Implications for Well-Being ,University of Utah**.**
11. Pucl-k report (2014), on sexual minorities violation.
12. The invisible one's- sexual minorities, 2013, bengalore, j med res.
13. The human rights of sexual minorities in Africa, 2004, Sebastian Maguire.
14. victimization among special population's : sexual minorities/lgbt's-2004, NEWYORK.